1957

ಶ್ರೀ ಕೃಷ್ಣಪ್ರಕಾಶನ
ಉಡುಪಿ.

ಅಮೃತ ಲಹರಿ

(ಐದು ಗೀತ ರೂಪಕಗಳ ಸಮುಚ್ಚಯ)

★

ಯಸ್. ವೆಂಕಟರಾಜ

೧೯೫೭

★

ಶ್ರೀಕೃಷ್ಣಪ್ರಕಾಶನ, ಉಡುಪಿ.

ಮುದ್ರಕರು:
ಮೆಜೆಸ್ಟಿಕ್ ಪ್ರೆಸ್,
ಉಡುಪಿ.

ಬೆಲೆ: ೧—೧೨—೦.

ಪ್ರಕಾಶಕರು:
ಶ್ರೀಕೃಷ್ಣ ಪ್ರಕಾಶನ,
ಉಡುಪಿ, ದ. ಕ.

ಮುನ್ನುಡಿ

ಅಮೃತ ಲಹರಿಯು ಐದು ಗೀತ ರೂಪಕಗಳ ಸಮುಚ್ಚಯ. ಪುರಾಣದ ಐದು ಘಟನೆಗಳನ್ನು ಈ ಐದು ರೂಪಕಗಳಲ್ಲಿ ಬಳಸಿಕೊಂಡುದಾಗಿದೆ. ಆದರೆ ಕಲ್ಯಾಣ ರೇಖೆಯು ಜೈನಪುರಾಣಗಳಿಗನುಸಾರವಾಗಿರುವುದರಿಂದ ಇದರ ರಾವಣನು ರಾಕ್ಷಸನಾಗಿರದೆ ಧರ್ಮಪರಾಯಣನಾದ ಸಜ್ಜನನಾಗಿರುವನು. ಆದುದರಿಂದ ಪತಿಯ ವಾಕ್ಯೋಲ್ಲಂಘನೆಗಾಗಿ ಸೀತೆಯು ತಾನೇ ಪ್ರಾಯಶ್ಚಿತ್ತವನ್ನು ರಾವಣನ ಮುಖಾಂತರ ಹೊಂದುವಳು. ರಾವಣನು ಸೀತೆಯ ಯೋಗ್ಯತೆಯನ್ನು ತಿಳಿದೂ ತನ್ನ ಕರ್ತವ್ಯತಾ ಭಾವದಿಂದಾಗಿ ನ್ಯಾಯನಿಷ್ಠುರನಾಗಿ ವರ್ತಿಸುವನು. ಇದನ್ನು ರಾಮನು ತಿಳಿಯದೆ ಇರುವುದರಿಂದ ರಾವಣನು ಸಾಯಬೇಕಾಗುವುದು. ಅದು ಅವನ ದುರದೃಷ್ಟ!

ಇನ್ನುಳಿದ ತಪೋಭಂಗ—ಮಿಲನರಾತ್ರಿ — ಮಂಗಲಗೌರಿ -- ದಿವ್ಯದರ್ಶನ ಈ ನಾಲ್ಕು ರೂಪಕಗಳು ಪುರಾಣಗಳಿಗೆ ಅನುಸಾರವಾಗಿವೆ. ಪಾತ್ರಗಳ ಗೌರವಕ್ಕೆ ಅನುಗುಣವಾಗಿ ಅವುಗಳನ್ನು ಯುಕ್ತರೀತಿಯಲ್ಲಿ ಹೊಂದಿಸಿಕೊಂಡು ಪುರಾಣ ವಿಚಾರಗಳನ್ನು ತಾರ್ಕಿಕವಾಗಿ ಸಮರ್ಥಿಸಿ ಬರೆದಿರುವೆನು. ಇವುಗಳೆಲ್ಲಾ ಪುರಾಣಗತ ಏಕದೇಶಿಕ ಘಟನೆಗಳಾಗಿರುವುದರಿಂದ ಒಂದೇ ದೃಶ್ಯ ಕೆಲವೇ ಪಾತ್ರಗಳಿಂದ ನಾಟಕದ ನಿರ್ವಹಣವಾಗಲು ಸಾಧ್ಯವಿದೆ. ಹೀಗಾಗಿ ರಂಗಭೂಮಿಯ ಮೇಲೆ ಅಭಿನಯಿಸುವ ದೃಷ್ಟಿಯಿಂದ ಇವುಗಳನ್ನು ಬರೆದುದೆಂದು ಬೇರೆ ಹೇಳಬೇಕಾಗಿಲ್ಲ.

ನಾಟಕದ ದೃಷ್ಟಿಯಿಂದಲಾಗಲಿ ಸಾಹಿತ್ಯದ ದೃಷ್ಟಿಯಿಂದಲೇ ಆಗಲಿ ಅಮೃತ ಲಹರಿಯು ರಸಿಕ ಜನರ ಹೃದಯಕ್ಕೆ ಮುಟ್ಟಿ ಮೆಚ್ಚುಗೆಯಾಗಬಹುದೆಂಬ ಭರವಸೆಯಿಂದ ಇದನ್ನು ಸಹೃದಯರ ಮುಂದೊಪ್ಪಿಸುವೆನು.

೨—೧೦—೧೯೫೭ **ಯಸ್. ವೆಂಕಟರಾಜ**

ಅಮೃತ ಲಹರಿ

ತಿದ್ದುಪಡಿ

ಪುಟ	ಪಂಕ್ತಿ	ಅಶುದ್ಧ	ಶುದ್ಧ
३೯	೨೧	ಕುಯ್ಯುವ	ಕೊಯ್ಯುವ
೬೦	೧೧	ಕುಂತಲ	ಕುಂಡಲ
೬೦	೧೬	ಧಗ್ಧದಹನ	ಧಗದ್ದಹನ
೮೩	೧೫	ಸಿಡುಕಿಗಾತಿ	ಸಿಡುಕುಗಾತಿ

ಕಲ್ಯಾಣರೇಖೆ

ಪಾತ್ರವರ್ಗ

ವನದೇವತೆಯರು
ಸೀತೆ
ಸ್ವರ್ಣ ಹರಿಣ
ರಾಮ
ರಾವಣ

ಪ್ರವೇಶ—ವನದೇವತೆಯರು ದೃಶ್ಯ—ವನಪ್ರದೇಶ.

ಬಂದಿತೋ ವಸಂತಮಾಸ
ವಿವಿಧ ಪುಷ್ಪ ಚಯದಹಾಸ
ನವ ಪರಿಮಳ ಸುಖೋಲ್ಲಾಸ
ಈ ವಸಂತಮಾಸ!
ನಮ್ಮ ತಾಯಿ ಸೀತೆಗೆ
ವಿಮಲ ಭೂಮಿಜಾತೆಗೆ
ಏನಿದಕಟ ವಿಪರ್ಯಾಸ
ತೊಡಗಿದಂತ ವನವಾಸ!
ಸಂತೈಸಲು ಬಂದ ವೇಷ
ಈ ವಸಂತಮಾಸ!
ಸಕಲ ಜಗದ ಮಂದಹಾಸ
ಈ ವಸಂತಮಾಸ!
ಅಲರ ಹಕ್ಕಿ ದಂಪತಿಗಳೆ
ಹೊಸತು ಹಾಡ ಹಾಡಿರಿ
ಮಲರ ಮುದ್ದು ಮಲ್ಲಿಗೆಗಳೆ
ಜೇನನಿತ್ತ ನೀಡಿರಿ

ನೆಲದ ನಚ್ಚು ನವಿಲುಗಳೆ
ಧಿಮಿ ಧಿಮಿತಕ ಕುಣಿಯಿರಿ
ಸಕಲ ಜೀವ ಜಂತುಗಳೆ
ಕಣ್ಣ ತೆರೆದು ನೋಡಿರಿ!

ನಮ್ಮ ತಾಯಿ ಸೀತೆಗೆ
ವಿಮಲ ಭೂಮಿ ಜಾತೆಗೆ
ಏನಿದಕಟ ವಿಪರ್ಯಾಸ
ತೊಡಗಿದಂತ ವನವಾಸ

ಜಗನ್ಮಾತೆ ಮಗಳಿಗಾಗಿ
ತಳೆದರೂಪ ಮುಂದಿದೆ
ಗಿಣಿಗಿಣಿಗುಲು ಗೆಜ್ಜೆಯಲಿ ವ-
ಸಂತಮಾಸ ಬಂದಿದೆ!

(ಮುಂದೆ ನೋಡಿ ಆಶ್ಚರ್ಯದಿಂದ)

ಅದೋ ನೋಡು ಸ್ವರ್ಣ ಹರಿಣ
ನಲಿದು ನಲಿದು ಬರುತಿದೆ
ನವ ವಿಲಾಸದೊಂದು ಲಾಸ್ಯ
ರೂಪಗೊಂಡು ಬರುತಿದೆ

ನಮ್ಮ ತಾಯಿ ಸೀತೆಗೆ
ವಿಮಲ ಭೂಮಿ ಜಾತೆಗೆ
ಏನಿದಕಟ ವಿಪರ್ಯಾಸ
ಒದಗಿ ಬಂದ ವನವಾಸ

ಎಂಟುದೆಸೆಗೆ ಬೆದರುನೋಟ
ಮೆಲ್ಲ ಮೆಲ್ಲ ಬರುತಿದೆ
ಏನಿದಮಮ ಸ್ವರ್ಣ ಹರಿಣ
ಗೆಲವು ಕಾಣ್ಕೆ ತರುತಿದೆ!

ಬಂದಳಲ್ಲಿ ನಮ್ಮ ತಾಯಿ
ಭಾವುಕತೆಯ ಹಣ್ಣುಕಾಯಿ
ಇತ್ತ ಬಂದ ಬೆದರುಗಣ್ಣು
ಅತ್ತ ಕಾಂಬ ಚೆಲುವುಗಣ್ಣು!
ಬಂದಳದೋ ನಮ್ಮ ಸೀತೆ
ಸ್ವರ್ಣ ಹರಿಣದನುಗತೆ!

(ಹೋಗುವರು)

(ಅತ್ತ ಸ್ವರ್ಣ ಮೃಗದ ಬರುವಿಕೆ. ಇತ್ತ ಸೀತೆಯ ಪ್ರವೇಶ)

ಸೀತೆ—
ಅಹೋ ಏನು ಚೆಲುವು ಚೆಂದ
ಇದೇ ಹರಿಣ ಶಿಶುವಿನಂದ
ಈ ವಸಂತ ಮಧುರಿಮೆಯಲಿ
ಮೂರ್ತಿಗೊಂಡ ಶಿವಾನಂದ!

(ಜಿಂಕೆ ಸುತ್ತುತ್ತಿರುವುದನ್ನು ಕಂಡು)

ಮಮ ಚಿಂತೆಯ ಪರಿಹಾರಕೆ
ನೀನಾಗಿಯೆ ಬಂದಿಹೆಯಾ?
ಕಲ್ಪನೆಯೋ ಸ್ವಪ್ನವಿದೇನ್
ಈ ರೂಪದೆ ನಿಂದಿಹೆಯಾ?

ಚಪಲಾಕ್ಷದ ಚಾಂಚಲ್ಯವೊ
ಭಯ ಕಲ್ಪದ ನಿಟ್ಟುಸಿರೊ?
ಕುಪಿತಾತ್ಮರ ಕೂರಂಬಿನ
ಮೈನೋವಿನ ಕಣ್ಣೀರೊ?

ಬನ ಬೆದರಿಕೆ ಬಲುವಾಯಿತೆ
ಕೇಸರಿ ಕಣ್ಮಸಗಿಹುದೆ?
ನಿನ ಬಳಗವ ತೊರೆದೀಕಡೆ
ಬಂದಿಹ ಬಾಳ್ಬೆದರಿಹುದೆ?

ಕುಳಿತಿರುವೆನು ಕಾನನದೊಳು
ಮಧುಮಾಸದೊಳೇಕಾಕಿ
ಎಲೆ ಹರಿಣವೆ–ಬಾ ಕುಣಿ ಕುಣಿ
ದಾಡುತ ನೀನೆನ್ನ ಸಖಿ!

(ಜಿಂಕೆಯನ್ನು ಹಿಡಿಯಲು ಹತ್ತಿರ ಸರಿದಂತೆ ಅದು ಓಡಿ ಹೋಗುವುದು)

ಸೀತೆ—(ದುಃಖದಿಂದ)

ಅಹೋ ಏನು ಚೆಲುವು ಚೆಂದ
ನನ್ನ ಬಾಳಿಗೊದಗಲಿಲ್ಲ
ಈ ವಸಂತ ಮಧುರಿಮೆಯಲಿ
ಬರಿದೆ ಕಾದು ಕುಳಿತೆನಲ್ಲ!

(ರಾಮನು ಪ್ರವೇಶಿಸಿ ಆಶ್ಚರ್ಯದಿಂದ)

ರಾಮ—

ಏನಿದು ಜಾನಕಿ–ಚಂದ್ರಮುಖಿ!
ದುಃಖಾಸ್ಪದಗೊಂಡಿಹ ತನುರೀತಿ
ಬಾಡಿದ ಮುಖ ಕಣ್ಣೀರಿನ ವಸತಿ
ಕಾಡುತಲಿದೆ ಮೈ ನಡುಕದ ಭೀತಿ
ಏನಾಯಿತು ನಿನ್ನಾಸೆಗೆ ಕೊರತೆ
ದೀನ ಮೌನ ಮಾಲಿನ್ಯದ ಚಿಂತೆ
ಏನಾದರು ಸರಿ ತಂದೇ ತರುವೆ
ನೀನಾಡುವುದೊಂದೇ ತಡ— ಈವೆ

ಸೀತೆ—(ಉತ್ಸಾಹದಿಂದ)

ನಲಿದು ಬಂದುದೊಂದು ಜಿಂಕೆ
ಅದರ ದೇಹ ಸ್ವರ್ಣ ರೇಖೆ
ಅದರ ಕಣ್ಣು ಕುಣಿವ ಮಿಂಚು
ಮದನ ಬಾಣ ಸೆಳೆದ ಸಂಚು!
ಅದರ ಚುರುಕು ಕಾಲ ಕುಣಿತ
ಗಾಳಿಯೊಡನೆ ಸುಳಿವ ಗೀತ

ಅದರ ರೂಪ ನಯನಾಮೃತ
ಆದೇ ನನಗೆ ಬೇಕು ನಾಥ!

ರಾಮ—(ವಿಚಾರವಾಗಿ)

ಏನುಮಾತಿದು ಸೀತೆ–ಎಲ್ಲಿ ಚಿನ್ನದ ಜಿಂಕೆ
ಆದಕಾಗಿ ಮನಸೋತು ಮರುಗುತಿಹುದೆ?
ಭೂಲೋಕದಾಳದಲಿ ಸ್ವರ್ಣಹರಿಣವ ಕಾಂಬ
ಕೌತುಕದ ಮಾಯೆಯನು ನಂಬಬಹುದೆ?
ಮಧು ಮಾಸದೆಸಕದಲಿ ಹೊಂಬಿಸಿಲ ಹೂಟೆಯಲಿ
ಜಗವೆಲ್ಲ ಜಗಜಗಿಸಿ ಕಾಣಲಿಹುದು
ಚದುರೆ! ನಿನ್ನಾಸರದ ಹೊನ್ನಹೊಗರನು ಹೊತ್ತು
ಮೃಗಪಕ್ಷಿ ಬಂಗಾರವೆನಿಸಬಹುದು

ಸೀತೆ—(ಹುಸಿ ಮುನಿಸಿನಿಂದ)

ನಾಕಂಡ ನಿಚ್ಚಟದ ನೋಟವದು ನಾನೆನ್ನ
ಕಂಗಳನೆ ನಂಬದಿಹ ಕಾಲವುಂಟೆ?
ಸಾಕು ಬಿಡಿ! ಕಾಡಿನಲಿ ಕೂತ ಜೀವಿತಕಾಗಿ
ಏಕೊ ಬಂದಿದೆ ನನ್ನ ಭಾಗ್ಯದೂಟೆ!

(ಮುಂದೆ ನೋಡಿ ಉತ್ಸಾಹದಿಂದ)

ಅದೊ ಬಂತು ಆ ಜಂತು! ಕಂತು ಕಾನನದಲ್ಲಿ
ತೂರಿರುವ ಚಂದ್ರಿಕೆಯ ಪುಟಿಕೆ ಚೆಂಡು
ಅದೊ ನಿಂತು ನೋಡುತಿದೆ! ಕಣ್ಣಳತೆಯಲಿ ನನ್ನ
ಜೀವವನೆ ಸೆಳೆಯುತಿದೆ ಮೋಹಗೊಂಡು

ಈ ಕಾಡಿನಲಿ ಭಯದ ಬೀಡಿನಲಿ ನಾನೇನ
ಕೊಳಲುಂಟು ನಿಮ್ಮೊಡನೆ ಕೇಳಿಕೊಂಬೆ
ನೀವೆ ಕಾರುಣ್ಯದಲಿ ನನ್ನ ಸಂತಸಕಾಗಿ
ಕೊಡುವ ಬಳುವಳಿಗಾಗಿ ಬಂದುದೆಂಬೆ!

ರಾಮು—(ಸೀತೆಯ ಕೈ ಹಿಡಿದು ಸಮಾಧಾನವಾಗಿ)
ಸೀತೆ ನೋಡದರ ಕಡೆ ನಯದ ನೋಟದ ಹಿಂದೆ
ಏನೊ ಕಿತವದ ಸಂಚು ಮಿಂಚುತಿಹುದು
ಭೀತ ಚಂಚಲಗತಿಯು ಹದನಲ್ಲ—ದರ್ಪದಲಿ
ನಡೆವ ದೈತ್ಯತೆಯ ಧೃತಿ ಹೊಂಚುತಿಹುದು
ಬೇಡ ಬೇಡಾಮಿಗವು ನಾಡುಗರ ಮುದ್ದಾಟ
ದಾಡುಗೊಂಬೆಯದಲ್ಲ ಸಾಧು ಶೀಲ
ಕಾಡಿನಲಿ ಕುಣಿ ಕುಣಿವ ದುಷ್ಟ ಶಕ್ತಿಯ ಮೂಲ
ನೋಡದೋ ರಕ್ಕಸರ ಮೋಹಜಾಲ

ಸೀತೆ—(ಅನುನಯದಿಂದ)
ಎಂತ ಮಾತಿದು ನಾಥ! ಹೇ ಜಗದ್ವಿಖ್ಯಾತ
ದುಷ್ಟ ಶಕ್ತಿಗೆ ನಾವು ಬೆದರಲುಂಟೆ?
ಒಳ್ಳಿತಾದರು ಬೇಕು. ಕೆಡುಕಾದರೂ ನಮ್ಮ
ಮಮತೆಯಲಿ ಮಿಂದು ಮಿದುಗೊಳುವ ಮಾಟೆ!
ಈ ಲತಾಕುಂಜದಲಿ ಈ ಕುಸುಮರಾಶಿಯಲಿ
ಈ ವಸಂತಾಗಮದ ದಿವಸದಲ್ಲಿ
ಈ ಹೊನಲು ಹೊಲ ಬಯಲ ತೀರದಲಿ ಸುಳಿದಾಡಿ
ನನ್ನೊಡನೆ ಮುದ್ದಿರಲಿ ಬಾಳುತಿರಲಿ!

ರಾಮು—ಏನ ಹೇಳಲಿ ನಾನು?

ಸೀತೆ— ಹೇಳದಿಹುದೇ ಲೇಸು

ರಾಮು—ತಮ್ಮನಾದರು ಬರಲಿ ತಳುಹು ಸೀತೆ!

ಸೀತೆ—ತಮ್ಮನೇತಕೆ ಬೇಕು?

ರಾಮು— ಏನೊ ಮನಸೊಪ್ಪದಿದೆ!

ಸೀತೆ—ಒಪ್ಪಿತಕೆ ಸಾಲದೇ ನನ್ನ ಮಾತೆ?

(ಕಾಲಿಗೆರಗಿ)

ಸ್ವಾಮಿ ಚಿಂತೆಯಿದೇಕೆ? ಈ ಕಿರಿಯ ಬಯಕೆಯಲಿ
ಕಳವಳವ ಕಂಡು ನಿಲಬೇಕೆ ನಾನು?
ನನ್ನಾಸೆಯಮರತೆಗೆ ನಿತ್ಯ ನೀರನು ಹೊಯ್ದು
ಹೂವಕೊಳುವವರು ನೀವಲ್ಲವೇನು?

ರಾಮನೆಂದೇ ಜಗತಿ ಹಾಡುತಿದೆ. ಸುಖ ದುಃಖ
ದಾರಾಮವೆಂದು ಕೊಂಡಾಡುತಿಹುದು
ರಾಮ ರಮಣೀಯಗುಣಧಾಮ! ಹೆಂಗರುಳಿನಲಿ
ಹೂತ ಹುಮ್ಮಸವಿದನು ಕೊಳಿರಿ ಕೊಯ್ದು

ರಾಮ--(ನಿರುಪಾಯನಾಗಿ ಸೀತೆಯನ್ನು ಎತ್ತಿಹಿಡಿದು ಸುತ್ತಲೂನೋಡಿ)

ಗರವಟಕೆಹೋದ ಲಕ್ಷ್ಮಣನಿನ್ನು ಬರಲಿಲ್ಲ
ಈಕಾಡು ಕಾದ ಹೆಬ್ಬಾವಿನಂತೆ!
ಏಕೊ ಕಣ್ಣದುರುತಿದೆ. ಬಂದಿಹುದೆ ದುಷ್ಕಾಲ!
ಮನಸಿಹುದು ತೂಗುಮುಯ್ಯಾಲೆಯಂತೆ!

ಈ ಸೀತೆಯನುರೋಧ ಮನಸನಾಕಡೆತಬ್ಬಿ
ತಳ್ಳುತಿದೆ. ಹೆಬ್ಬಯಕೆ ಹೊಸೆವಹೆಣ್ಣು.
ಮಾನಸಂ ಕುದುರುತಿದೆ. ಏನೊ ವಿಶ್ವಾಸದಲಿ
ವಿಶ್ವವೇ ಕೊನೆಮಿಟುಕುತಿರುವ ಕಣ್ಣು!

(ಸೀತೆಯೊಡನೆ)

ನಲ್ಲೆ ನನ್ನೊಡನಾಡಿ! ಹುಲ್ಲೆಗಂಗಳ ಚೆಲುವೆ
ಹುಲ್ಲೆಹಸುಳೆಯ ಮೇಲೆ ಮನಸಾಯಿತೆ?
ನಿಲ್ಲು. ನಿನ್ನಾಸೆಯನು ಫಲಿಸದಿಹೆ ನಿನ್ನೆಂತು
(ತಡೆದು) ಆದರೂ ಮನಸುಡುಗುತಿಹುದು ಸೀತೆ!

(ಅವಳ ಸುತ್ತಲೂ ವೃತ್ತಾಕಾರವಾಗಿ ಗೆರೆಯೆಳೆದು)

ರಾಮ — ಇಲ್ಲೆ ನಿಂತಿರು ಮುಂತೆಬಾರದಿರು-ನನ್ನಾಣೆ
ಕಾಮುಕರ ಕೋಟಲೆಯುಬಲು ಬೆದರಿಕೆ
ಈ ಗೆರೆಯ ದಾಂಟದಿರು. ಮಾನವತಿಯರ ಕಾವ
ಇದು ರಾಮ ನಾಮ ಕಲ್ಯಾಣ ರೇಖೆ!
ಈ ಕೋಟೆಯುಲಿ ದುಷ್ಟಶಕ್ತಿ ಕಾಲಿಡದಿಹುದು
ಇದು ಪುಣ್ಯ ಶೀಲತೆಯ ಸತ್ವದರಿಕೆ
ಈಗೆರೆಯದಾಂಟದಿರು ಆರ್ತ ಜನರನುಕಾವ
ಇದು ರಾಮ ನಾಮ ಕಲ್ಯಾಣ ರೇಖೆ!
ಬೆದರದಿರು ಚಪಲಾಕ್ಷಿ! ಅರೆಗಳಿಗೆಯಲಿ ಜಿಂಕೆ
ಬರಲಿಹುದು ನಿನ್ನ ಕೊಂಡಾಟಕಾಗಿ
ಬೆದರದಿರು ಲಕ್ಷ್ಮಣಂ ಬರುವನಕ ದಾಂಟದಿರು
ಈ ನಿಯಂತ್ರಿತ ಗಂಡು ಗೆರೆಯನೀಗ!

(ರಾಮನು ಧನುರ್ಬಾಣಗಳನ್ನು ಹಿಡಿದು ಆ ಕಡೆ ಮೆಲ್ಲ ಮೆಲ್ಲನೆ ಹೋಗುವನು. ಸೀತೆ ಆ ಕಡೆ ಮುಖ ಮಾಡಿ ನಿಂತು ನೋಡುತಿರುವಳು.)

ರಾವಣ—(ಪ್ರವೇಶಿಸಿ ಆಡಂಬರವಾಗಿ)
ನಾನಸುರ ಚಕ್ರವರ್ತಿ
ಧರ್ಮಕರ್ಮ ಸಮವರ್ತಿ—
ವಿರಾಡ್ವಿಶ್ವಪದಾರೂಢ
ಪ್ರಜಾಧರ್ಮದಧಿಕಾರಿ
ವಿಯಚ್ಚರರ ದುರಾಚಾರ
ವಲಂಗೊಳಿಪ ಜಯಭೇರಿ!
ಕುಬೇರಾತ್ತ ಮಹಾವಿತ್ತ
ಸಮಾಕರ್ಷ ಹಿತಕಾರಿ
ಮದೋನ್ಮತ್ತ ಧರಾಧೀಶ
ದುರುದ್ದೇಶ ಸಂಹಾರಿ!

ಅನಾಸಕ್ತ ತಪೋಧರ್ಮ
ನಿರುದ್ಯೋಗದಪಹಾರಿ

ಅಂಸತುಷ್ಟ ಸುರಾಂಗನೆಯ
ರಸಾಧಾರಣೋದ್ಧಾರಿ!
ನಾನಸುರ ಚಕ್ರವರ್ತಿ
ಧರ್ಮ ಕರ್ಮದನುವರ್ತಿ!

(ಮುಂದೆ ಸೀತೆಯನ್ನು ನೋಡಿ ಗೌರವದಿಂದ ತುಸು ಹಿಂದೆ ಸರಿದು)

ಈಕೆ ವೈದೇಹಿ ಭೂಜಾತೆ ನಿಂದಿಹಳಿಲ್ಲಿ
ನಿಶ್ಚಲಂ ನೀರವಂ ನಿರ್ವಿಕಾರಂ!
ಏನೊ ತತ್ತರಗೊಂಡ ಮನಸಿನೆಣಿಕೆಯ ನೇಣಿ
ನನುಸಾರದಭಿಸಾರ ಚಿಚ್ಚಕೋರಂ

ಈ ಪುಣ್ಯ ಭೂಮಿಕೆಯ ಪಾವನೋದಯವಾಗಿ
ಕಾಡೆ ಸದ್ವೈಭವದ ಸದನವಾಯ್ತು!
ಈ ಧರ್ಮವೇದಿಕೆಯನುಳಿದಯೋಧ್ಯಾನಗರಿ
ಬರಗೊಂಡ ಮಾನವ್ಯದಡವಿಯಾಯ್ತು!

ಏನು ಧರ್ಮವಿದೆಂದು ನೋಡಬಯಸಿಹೆನಿಂದು
ಜಗನ್ಮಾತೆಯನ್ನರಿವ ಬಾಲಬುದ್ಧಿ
ಈ ಚರಾಚರ ಜಗದ ಧರ್ಮಕಾರಣಗಳನು
ಕಾವನನ್ನಧಿಕಾರ ಹೃದಯ ಶುದ್ಧಿ!

(ನಸುನಗುತ್ತ)

ಏನು ಹುಚ್ಚಾಟವಿದು! ಹರಿಣ ಶಾಬಕೆ ಸೋತು
ನಾನಿಟ್ಟ ಕಾಮನೆಗೆ ಸೆರೆಯಾದಳು
ಏನು ನಾಥನನಯದ ಮಾತಿನೆಲ್ಲೆಯ ಮೀರಿ
ತಾನೆ ನಾಟಕಕೆ ನಾಂದಿಯ ಬರೆದಳು!

ನೋಡುವೆನು ಮೈಮರಸಿ ರಾಮಚಂದಿರನರಸಿ
ಮಿಾರುವಳೊ ನಿಯಮದೀ ಗಂಡುಗೆರೆಯ
ಮಿಾರಿದರೆ ಸದ್ಧರ್ಮಪಾಲನೆಯು ಕತಕಾಗಿ
ನೋಯಬೇಕೇ ಬೇಕು-ಇರದುಪಾಯ!

(ಅಡಗಿ ನಿಂತಿರುವನು)

ಸೀತೆ— ಏನಿದು ಜಿಂಕೆಯ ಬೆನ್ನಟ್ಟದ ನ
ನ್ನಿನಿಯನ ಸದ್ದೇ ಸುಳಿದಿಲ್ಲ
ಏನಿದು ಯೋಜನದಾಕಡೆ ಸಾರಿದ
ಪರಿಯಂತಿದೆ ನೆಲೆ ತಿಳಿದಿಲ್ಲ!

(ಚಿಂತೆಯಿಂದ)

ಏತಕೆ ನುಡಿದೆನು? ಆ ಮರಿ ಜಿಂಕೆಯೆ
ಘಾತಕವಾಯಿತು ಹದಿಬದೆಗೆ
ಈ ತನಕವು ಮರು ಮಾತಾಡದ ನ
ನ್ನಾಚಾರದ ನಿರ್ಮಲ ನದಿಗೆ!

(ಕಿವಿಗೊಟ್ಟು ಕೇಳುತ್ತ)

ದೂರಕೆ ದೂರಕೆ ಸಾರಿದ ಹೆಜ್ಜೆಯ
ಮಾರ್ದನಿ-ಕೋಪದ ಹುಂಕಾರ
ಸೇರಿತೆ ಕೈಕಸವರದಾ ಕಾಮನೆ?--
ಏನಿದು ಧನುಸಿನ ಠಂಕಾರ!

(ದೂರದಿಂದ—ಹಾ ಸೀತೆ· ಹಾ ಲಕ್ಷ್ಮಣ ಎಂಬ ಆರ್ತನಾದ ಕೇಳುವುದು ಸೀತೆ ಬೆಚ್ಚಿಬಿದ್ದು)

ಘಾತವಾಯ್ತು ಮಹಾಘಾತ!
ಏನಿದಕಟ ದುಃಖ ಸಹಿತ
ದಾರ್ತನಾದ! ವಾಯುನೀತ
ಆಕ್ರಂದನ! ಹಾ ಸೀತೇ

ಹಾ ಲಕ್ಷ್ಮಣ ಎನುವ ದುಃಖ
ದಾರೋದನ ಏನಿದಕಟ!
ಕೊರಲ ಹಿಡಿದ ಬಲು ಸಂಕಟ
ಎದೆಯ ಕೊರೆವ ವಜ್ರಕೀಟ

ನಡುಗುತಿಹುದು ಭೂಮಿ ತಟ
ನಿಲಲಾರೆನೊ ನಾನಕಟ!

(ಉದ್ವೇಗದಿಂದ ಕಾಲ ಬಿಡನೋಡಿ)

ಅಯ್ಯೊ ಗಂಡು ಗಡಿಯ ರೇಖೆ
ನಾನಿಲ್ಲಿಯೆ ನಿಲಬೇಕೆ?
ಕಾಲತಡೆದು ಹಿಡಿದಿರುವುದು
ಜೀವವಾಚೆ ತೂರಿರುವುದು—

ಏಂಗೈಯಲಿ ಮಹಾನರ್ಥ
ಬಾಳಿರುವುದು ಬರೇ ವ್ಯರ್ಥ
ಅದೇ ಜಿಂಕೆ ಸುಡುವ ಬೆಂಕೆ
ಯಾಯಿತೆನ್ನ ದುರ್ಭಾಗ್ಯಕೆ!
ಹಾ ರಾಮಾ! ನಿಲ್ಲಲಾರೆ
ಅಯ್ಯೊ! ಗೆರೆಯ ಮೀರಲಾರೆ—

(ಹುಚ್ಚಳಂತೆ)

ಸಾಕು ಸಾಕು ಬಾಳ್ಕೆಗಿರದ
ನೀತಿನಿಯಮದನುರೋಧ
ಕ್ಷಮಿಸೆನ್ನ ಮಹಾಪರಾಧ
ಗತಿಯೊಂದೇ ನಿನ್ನ ಪಾದ! --

(ಕಲ್ಯಾಣ ರೇಖೆಗೆ ನಮಸ್ಕರಿಸಿ ಉದ್ವೇಗದಿಂದ ದಾಟ ಮುಂದೆ ಬರುವಳು)

ರಾವಣ— (ಮುಂದೆ ಬಂದು ಅಡ್ಡ ನಿಂತು ತಡೆದು)

ತಡೆನಿಲ್ಲು ಧರ್ಮಸಂಕಟವಿದನು ತಿಳಿದಿಹೆನು
ತಿಳಿದಿಹೆನು ನಿನ್ನ ಮನಸಿನ ಕುದಿಯನು
ನಡೆವದಾರಿಯದೊಂದೆ ದೇವರಿಗು ಜೀವರಿಗು
ಅದಕಾಗಿ ಧರ್ಮ ರಕ್ಷಕನು ನಾನು!

ಹತ್ತು ದೆಸೆಯಾಳಿಕೆಗೆ ಹೊತ್ತ ತಲೆಯಿಪ್ಪತ್ತು
ಕೈ ಕ್ರಿಯಾ ಶೀಲತೆಯ ರಾಜ್ಯಭಾರ!
ಚಿತ್ತೈಸು ಜಾನಕಿ! ಜಗಜ್ಜೀವಿಗಳನು ಬಿಗಿ
ದಿಟ್ಟ ನಿಷ್ಠುರದ ಧರ್ಮಾಧಿಕಾರ!

(ಸೀತೆ ಹೆದರಿ ಹಿಂದೆ ಹಿಂದೆ ಸರಿಯುವಳು)

ರಾವಣ— ಬೆದರದಿರು ರಾವಣಂ ಪಾಪಚಿದ್ದ್ರಾವಣಂ
ಬಂದಿರುವನಿದೊ ಧರ್ಮ ದಂಡಧಾರಿ
ಅದೊ ಗಂಡುಗೆರೆವಿಾರಿ ಬಂದಿರುವೆ ಸುಖದುಃಖ
ದನುಭವಂ ವಿವಿಧ ಕರ್ಮಾನುಸಾರಿ!

ಬಾರಮ್ಮ ಮರುಗದಿರು. ನಿನ್ನ ನಿರ್ಮಲದೀಪ್ತಿ
ಪುಟಗೊಂಡು ಬೆಳಗಲಿದೆ ಸೋದರನಲಿ!
ಸದ್ಧಮದ ರೂಪಿತಕೆ ಸಹನೆಯೊಂದೇ ದಾರಿ
ಈ ನಾಟಕವೆ ಭವದ ಮುಳ್ಳಬೇಲಿ!

ಸೀತೆ— (ಸಮಾಧಾನವಾಗಿ)

ಸಹಜವಿದು ಸೋದರನೆ! ಧರ್ಮಮರ್ಮದ ಮಹಿಮೆ
ಕೂದಲೆಳೆಯಂತೆ ಕಣ್ ಕಾಣದಿಹುದು
ಅದೆ ಜೀವಿಜೀವಿಗಳ ವೈಕ್ಲವ್ಯ ಚಿತ್ತದಲಿ
ಹುದುಗಿ ಹಾವಸೆಯಂತ ಜಾರುತಿಹುದು!

ಏನೊ ಚಿತ್ತಕೆ ಬಂದ ವಿಭ್ರಮೆಯ ಗಟನಲಿ
ನಾನುರುಳುಬಿದ್ದು ಬಯಲಾಸೆಗೊಂಡೆ
ನಾನೆ ನಿಯಮದ ಮೇರೆ ಮೀರಿ ಹೊರಸಡೆಮ ನಿ
ನ್ನೀಸರ್ಪಗಾವಲಿನ ಪರಿಯ ಕಂಡೆ!

ಆದುದಾಯಿತು ಮುಂದೆ ಮೇದಿನಿಯ ಚೆಲುರಂಭೆ
ಈ ದಾರಿಯಲಿ ನಡೆದು ಕೆಡಲು ಸಲ್ಲ!
ರಾಮನದನೇ ಸಾರಿ ದಾರಿ ತೋರುವನೆಂಬೆ
ಸೋದರನೆ! ಈ ನಿನ್ನ ಬಾಳು ಸಫಲ!

(ಸೀತೆಯನ್ನು ಮುಂದಿಟ್ಟುಕೊಂಡು ರಾವಣನು ತೆರಳುವನು)

ವನದೇವತೆಯರು— (ಸುತ್ತಲೂ ನೋಡಿ)

ಏನಿದಹೋ ಬಿರುಗಾಳಿ
ನುಗ್ಗಿ ಬರುವ ಮಹಾಗೂಳಿ!
ದೆಸೆಯೆಲ್ಲವು ಧೂಳಿ ಧೂಳಿ
ಸುತ್ತುತಿರುವ ವೈತಾಳಿ!

ಇಂತ ಗಾಳಿಗಾವಳಿಯಲಿ
ಕೇಳುತಿರುವುದಾರ್ಭಟ
ಯಾರೊ ಲೋಕ ಲೋಕಗಳಿಗು
ಸುರ್ವ ಧರ್ಮಸಂಕಟ!

ಮಹಾಪುರುಷ ರಾವಣೇಶ
ನಮರ ಕೀರ್ತಿಯುಲ್ಲೇಖ
ಮೊಳಗುತಿಹುದು ವಿಯದ್ವಾಣಿ
ಕೇಳುತಿಹುದು ಮೂಲೋಕ—

(ಆಕಾಶವಾಣಿ ಕೇಳುವುದು)

"ಆತ್ಮನಃ ಪರಿಶುದ್ಧ್ಯರ್ಥಮಾಗತಾ ಜನಕಾತ್ಮಜಾ
ತಸ್ಯಾಃ ಸರ್ವ ಹಿತಾಯಸ್ಯಾದಶೋಕವನ ಸನ್ನಿಧಿಃ"

ವನದೇವತೆಯರು— (ಸಂತೋಷದಿಂದ)

ಮಾತಾಯಿಯು ಬರುವ ಹೊತ್ತು
ಸುವ್ವಿ ಸುವ್ವಿ ಹಾಡಿರಿ!
ಓತುಪುಣ್ಯ ಸದನವಾಯ್ತು
ನೋಡಿರಿ ಲಂಕಾಪುರಿ!

ಹಣ್ಣುಕಾಯಿ ಹರಕೆ ಹೊರುವ
ಹೂಗೊಂಚಲ ಬಳುವಳಿ
ರಂಗವಲ್ಲಿ ಬರೆದು ತರುವ
ಬಾಗೀನದ ಸಲುವಳಿ

ತಾಯದುಃಖ ಕಳೆಯುವಂತೆ
ತಂಬೂರಿಯ ಮೀಂಟಿರಿ
ನೋವು ಮರೆಯುವಂತೆ ಹೂವಿ
ನಂಬಾರಿಯ ಕಟ್ಟಿರಿ!

ರಾಮನಿತ್ತ ಬರುವನಂತೆ
ಕನ್ನಡಿಗರ ಓಬ್ಬಣ
ಹನುಮಂತನ ಹಾರಾಟದ
ಹುಮ್ಮಸಕದ ಕಾವಣ!

ಇಲ್ಲಿ ಶುಕ್ತಿ ಸುಖಸ್ವಾತಿ
ಸೋನೆಗಾಗಿ ಕಾದಿದೆ
ಎಲ್ಲ ಶಕ್ತಿಯಮಿತ ಭಕ್ತಿ
ಗೊಂಡು ಬಾಗಿ ಬರಲಿದೆ!

ಮುತ್ತೆ ಪರೆಯನುಳಿವ ರೀತಿ
ಮುಗಿವುದು ರಾಮಾಯಣ

ಸುತ್ತ ಹರಡಿ ಕಂಪುಗುವುದು
ತೊಡಗಿದ ಸೀತಾಯನ!

ನಮ್ಮ ತಾಯಿ ಬರುವಳಂತೆ
ಹಾಡಿರೆಲ್ಲ ಸುವ್ವಿ ಸುವಿ
ಧರ್ಮ ತೋರಿದಾರತಿಯಲಿ
ಬೆಳಗಲಿ ಭಾರತ ಭುವಿ!

೧೬—೧೧—೫೬

ತಪೋಭಂಗ

ಪಾತ್ರವರ್ಗ

ಧರ್ಮಪುರುಷ
ವನದೇವತೆ
ಪ್ರತೀಹಾರಿ
ಮೇನಕೆ
ಸಖಿಯರು
ವಿಶ್ವಾಮಿತ್ರ

ಪ್ರವೇಶ— ವನದೇವತೆಯೊಡನೆ ಧರ್ಮಪುರುಷ — ದೃಶ್ಯ— ವನಪ್ರದೇಶ

ಧರ್ಮಪುರುಷ—(ಸುತ್ತಲೂ ನೋಡಿ)
ಭೂಮಿ ಕಾವೇರಿಹುದು. ಛಟ ಛಟಲ್ ಸುಟ್ಟಿಹುದು
ಬಾನೆಲ್ಲ. ಪಾತಾಳದುದ್ಭುದಂ ಬುದ್ಬುದಂ
ಸೀರಾರಿಸಿಡಿದಿಹುದು. ಸ್ವರ್ಗ ಲೋಕದ ಮೇರೆ
ಹೊಗೆ ಹೊಗರಿದಂತಿಹುದು. ನೇಸರನ ಕೆಂದೇಸಿ
ನಿಸ್ತೇಜವಾಗಿಹುದು. ತಮಸು ಕವಿದಂತಿರುವ
ಬ್ರಹ್ಮಾಂಡಗೋಲದಲಿ ಹೊಸತೇನೊ ದಿವ್ಯತೆಯ
ದೀಪ್ತಿ ಜಗಜಗಿಸುತಿದೆ. ಹೊನ್ನಹೊಗರಿನ ಸ್ಫುರತ್
ಕೋಟಿಕಿರಣಂ ಪ್ರಭಾಮಂಡಲವ ಕಟ್ಟಿಹುದು.
ಗಾಳಿಯುಸಿಕನೆ ನಿಂತು ನೋಡುತೋಲೈಸುತಿದೆ.
ಈ ಚಂದ್ರ ಮಂದ್ರ ತಾರೆಗಳೆಂಬ ತಾರಕಂ
ಈ ದೈವದೈವತದ ಸಂಗೀತ— ಸರಿಗಮದ
ರಾಗ ವಿಸ್ತೃತಿಯ ಧಿಮಿಧಿಮಿತ— ಶೃಂಗಾರ ರಸ
ರಾಜೀವಲೋಚನೆಯ ನರ್ಮನಾಟ್ಯಂ— ಮದನ

ಗುರುವರೇಣ್ಯನ ಸದನ ಸಾಹಿತ್ಯ ಸುಖವೆಲ್ಲ
ಕಳೆದಿಹುದು. ಬೆಳ್ಬೆಳಗಿನಾಗಸದ ನೆರಳಂತೆ
ನೀರವಂ ನಿಶ್ಚಲಂ ನಿರ್ವಿಕಾರಂ!

ವನದೇವತೆ--
ಏನಿದಾಶ್ಚರ್ಯ! ಕ್ಷತ್ರಿಯ ಕುಲಲಲಾಮನೀ
ವಿನುತ ವಿಶ್ವಾಮಿತ್ರ ರಾಜಸ ಮಹಾಂಬುಧಿಯ
ಧೀಂಕಿಟ್ಟು ಗುರು ವಸಿಷ್ಟರ ಗಹನ ಗೌರವದ
ಪುಣ್ಯತೆಯ ಪೀಠಕೆ ಛಲಂತೊಟ್ಟು ನಿಗ್ರಹದ
ನಿಯಮ ನಿಷ್ಠುರದ ತಪಕೆಳಸಿಹನು. ತಡೆದನಿತು
ಸಿಡಿದೆದ್ದ ಚೇತನಂ ಮುಂದೆ ಮುಂದೋಡುತಿದೆ!
ಇವನೋ ಮಹರ್ಷಿ ದೇವರ್ಷಿ ಗದ್ದುಗೆಯೇರಿ
ಮತ್ತೆ ಬ್ರಹ್ಮರ್ಷಿಯರ್ಹತೆಗೆ ನೀಳ್ಕರಿಸುತಿಹ
ಚಾತಕದ ರೀತಿ ಶುಭ ಚಾರಿತ್ರ್ಯದಲಿ ತಪಂ
ಗೊಳುತಿಹನವೋಘಸತ್ವಂ. ಜನ್ಮ ಬಂಧನಂ
ಕರ್ಮ ಕಲ್ಯಾಣದಲಿ ಜಗುಳ್ದಿಹುದು ಪರೆಯಂತೆ!
ಇವನ ಬಾಳ್ ನಿರ್ಮಲಂ ನಿರ್ವಿಕಾರಂ!

ಧರ್ಮ—
ಈ ಬಾಳಪರಿಮಳಕೆ ವಿಷಯವಾಸನೆ ಕಳೆದು
ನಿರ್ವಿಷಯುವಾಗುತಿದೆ ಹೃದಯ ಕಿಂಜಲ್ಕ
ಈ ಶಾಂತ ಶರಣದಲಿ ನಾಕನರಕಗಳೆಲ್ಲ
ನಿರ್ನಾಮಃವಾಗುತಿವೆ—ಪುಣ್ಯಪರಿಪಾಕ!

(ಪ್ರತೀಹಾರಿಯು ಪ್ರವೇಶಿಸಿ ಬೆತ್ತವನ್ನು ಬೀಸುತ್ತ)

ಕರೆಯಿರಿ ಮದನನ—
ಮಧು ಮಾರಾಯನ!

ಭುಗಿಲೆದ್ದಿದೆ ತಪಸಿನ ತಾತ್ವಿಕತೆ
ಧಿಗಿಲೆದ್ದಿದೆ ಸ್ವರ್ಲೋಕದ ಜನತೆ!

ಇಂದ್ರಪೀಠ ನಡನಡುಗಿದೆ ಧರ್ಮದ—
ತಂದ್ರಯೋಗದ ಮಹಾಮಹಿಮೆ
ಸಂದುಹೋಯ್ತು ನಮ್ಮಾಳಿಕೆಯಮರತೆ
ಇಂದು ಮಾನವ ಮಹತ್ವದ ಮೇಲ್ಮೆ !

ಕರೆಯಿರಿ ಮದನನ
ಮಧು ಮಾರಾಯನ!

ಅಳಿಗಳತಂಡ ಮಧುರ ಮರಂದ
ಚೆಲ್ಲುತ ಚೆಲ್ಲುತಲೈತರಲಿ
ಗಿಳಿಗಳ ಬಳಗ ಮರಗಳನೇರಿ
ದೆಸೆದೆಸೆಗಾವಲಿಗೊದಗಿರಲಿ!

ಕುಹೂ ಕುಹೂ ಕೋಗಿಲೆ ಕಲರಾವದ
ಸೊದೆ ಸೋನೆಯ ಸೂಸುತ ಬರಲಿ
ನವಿಲೋ ಸಲಿನಲಿದಾಡುತ ಮಿಗಗಳಿ
ಗಾ ಹೆಜ್ಜೆಯ ಹುಮ್ಮಸು ತೆರಲಿ!

ಕರೆಯಿರಿ ಮದನನ
ಮಧು ಮಾರಾಯನ!

ಕಬ್ಬಿನ ಬಿಲ್ಲಿನ ಹೂಗಳ ಸರಳಿನ
ಸೆಳವಿನ ಗುರಿ ಕೈಗೆಡದಿರಲಿ
ಇಬ್ಬದಿಯಲಿ ಸಾಗಲಿ ಬೆಲೆವೆಂಡಿರ
ಕಣ್ಣೋಟದ ಕಿತವದ ಬೇಲಿ!
ಸೊಗಸಿನ ಮೇನಕೆ ಮಮತೆಯ ತೂಗುತೆ
ಮೈ ಹೂವಾಗುತೆ ನಡೆತರಲಿ

ಸ್ವರ್ಗದ ಭೋಗದ ವಿವಿಧೋದ್ವೇಗದ
ರಸರಂಜನೆ ಸುರಿಸುರಿದಿರಲಿ!
ಕರೆಯಿರಿ ಮದನನ
ಮಧು ಮಾರಾಯನ!
(ತೆರಳುವನು)

ವನದೇವಿ—(ಆಶ್ಚರ್ಯದಿಂದ)
ಆರೆ ಏನಿದಪಚಾರ! ಈ ತಪೋಭೂಮಿಕೆಗೆ
ಸುರಪನಟ್ಟುವನಂತೆ ಬೆಲೆವೆಂಡಿರ
ಮರುಳುತನವೇನೆಂಬೆ ಮಧುಮಾಸದೊತ್ತಡದ
ಪರಿವಾರಗೊಂಡು ಬಹನಂತೆ ಮಾರ!
ನರರ ಜನ್ಮಾಂಗಣಕೆ ಬರಲು ಕರ್ಮದ ಗಂಗೆ
ಪರಿಪೂತನೀ ರುಸಿಯು ಜಾತಿಜಗುಳಿ
ಬರಲಿ! ಈ ದಿವ್ಯತೆಯನುಣುವ ಪರಿಪಾಠದಲಿ
ನೆರವುಗೊಳಲುಂಟೆ ಮನ್ಮಥನ ದಾಳಿ

ಧರ್ಮ—
ಸಹಜವೀಮಾತು ವನದೇವಿ! ನಿನ್ನಾಸರಂ
ಪರಿಪಾವನಂ ಮುನಿಯ ಸಂಗದಿಂದ
ಕಿರುತನವನುಳಿದು ಹಿರಿತನಕೆ ಸಾರುವ ಹೊಳೆಯ
ಪರಿಯಂತೆ ಸಮ್ಮತವು ತಪಸ್ಸ್ಯಂದ!
ಸುರಪನಟ್ಟುವ ದಾಳಿ ಬನಕೆ ಬಂದಪಗೂಳಿ
ಈ ಚೆಲುವಿನುಗ್ಗಡದ ಮಾತು ಸಾಕು
ಎನಿತೊ ಹೊಸ ಸೃಷ್ಟಿಯಲಿ ತೊಡಗಿದಾತನ ಮುಂದೆ
ಚೆಲುವು ಚೆಲ್ಲಾಟ ಕೆರೆಗಿಳಿದ ಬೆಕ್ಕು!
ಆದರೊಮ್ಮೊಮ್ಮೆ ಹಮ್ಮೈಸುತಿದೆ ಮುನ್ನೋಟ
ಈ ನವ್ಯ ಸೃಷ್ಟಿಯಲಿ ದೊರೆತುದೇನು?

ಈ ಧರಿತ್ರಿಯ ಸಹಜ ಗತಿಗೆ ವಿಕೃತಿಯನಿಡುವ
ಕೆಡುಗೈಮೆಸಲದೆಂಬೆನಿದನು ನಾನು!

ವನದೇವಿ--(ಆಶ್ಚರ್ಯದಿಂದ)

ಏಂ ತಪೋಭಂಗದೀಯುಜ್ಜುಗಕೆ ನಿನ್ನಾತ್ಮ
ಧರ್ಮಪುರುಷನ ಚಿತ್ತ ಹೊಂದಲಿಹುದೆ?
ಅಂತರಂಗದ ಶಕ್ತಿಗೊಳುವ ತಾಪಸ್ಯದಲಿ
ಕಂತು ಕೂಡುವ ಕಾಟ ಸರಿಯೆಂಬುದೆ?

ಧರ್ಮ--

ಅಂತಲ್ಲ ವನದೇವಿ! ಈ ಕ್ಷಾತ್ರಕುಲಶಕ್ತಿ
ಯಮಿತ ಫಲ ನಿಷ್ಫಲಂ ಗೊಳುವ ಹದನ
ಸುರುಚಿರ ಕ್ಷೇತ್ರದಲಿ ಬೀಜಬಿತ್ತಿದ ಬೆಳೆಯು
ಗೌರವಕೆ ಬಾಗುತಿದೆ ಜಗದ ಪುಣ್ಯ!

ವನದೇವಿ -

ಏಂ ಕಾಮಲಾಲಸೆಗು ಧರ್ಮ ವೆಂಬರೆ?

ಧರ್ಮ— ಅಲ್ಲ—

ಇದು ಸೃಷ್ಟಿ ನಿಯಮುದಾದರ್ಶಮಾರ್ಗ
ಶಂಕರನ ಚಿತ್ ಪ್ರತಿಸ್ಪಂದದಲಿ ಮೇಳವಿಸಿ
ದನಿಗುಡುವ ಜಗನ್ಮಾತೆಯ ನಿಸರ್ಗ!

ಬಾಳು ಸಾರ್ಥಕವೆನಿಸಬೇಕು. ಕಲ್ಯಾಣದನು
ಬಂಧ ಬಾಂಧವ್ಯದಲಿ ಬಿಗಿಯಬೇಕು
ಈ ಕ್ಷಾತ್ರ ಪೌರುಷಂ ಜಗಕೆ ಸತ್ಪದವಾಗಿ
ಬೆಳೆದು ಬಹ ಭವಿತವ್ಯ ಬರಲೆ ಬೇಕು!
ಇದು ಧರ್ಮದಪಹಾಸ್ಯವಲ್ಲವೀ ಮುನಿವರನ
ಚಿರ ಪತನವಲ್ಲ—ಸುರರಾಸೆಯಲ್ಲ.

ಸುಕೃತದಭ್ಯುತ್ಥಾನ! ಈ ರಾಷ್ಟ್ರನಿರ್ಮಾಣ
ದಮೃತತೆಗೆ ನೆರವೀವ ದಿವ್ಯತೆಯಲಾ!

ವನದೇವತೆ—

ಏಂ ರಾಷ್ಟ್ರನಿರ್ಮಾಣ? ಏಂ ಕೀರ್ತಿಯುತ್ಥಾನ?
ಏನು ಪುಣ್ಯಕೆ ಪತನಗೊಂಬ ಹದನ?

ಧರ್ಮ—

ಕೇಳು—ಜಂಬೂದ್ವೀಪವಿದು ಭರತವರ್ಷವೆಂ
ದಾಗಲಿದೆ ಈ ಕೀರ್ತಿಯಿವನದಾನ!
ಅದಕಾಗಿ ಬರಲಿರುವ ಬಾವನ್ನದೀ ಸುಗ್ಗಿ
ಸಿಂಗಾರವೆಲ್ಲ ವಿಧಿ ಸಂಕಲ್ಪಿತ
ಮದನ ಬಾಣದ ಗುರಿಯು ಹದಕೆ ಧೃತಿಜಾರಿದರೆ
ಅದೆ ನಮ್ಮ ಮೇದಿನಿಯ ಪುಣ್ಯಚರಿತ!

ವನದೇವತೆ—(ಸಂತೋಷದಿಂದ)

ಮುದ್ದು ಮೇನಕೆ ಬರುವಳಂತೆ! ಮಧುಮನ್ಮಥರ
ಸದ್ದು ಸಾರುತಲಿಹುದು ಮಧುರ ಭಾವ
ಎದ್ದಿದ್ದು ಬಳ್ಳಿ ಹೂವಾಡುತಿದೆ. ಪರಿಮಳದ
ತಳ್ಳಂಕೆ ತೂಗುತಿಹ ರಸ ವೈಭವ!

(ಚಿಂತೆಯಿಂದ)

ಸಿಡುಕಿನೀ ಮುನಿಯತ್ತ ನಡೆವರಾರೋ ಕಾಣೆ!
ನಡುಗುತಿಹುದೆನ್ನ ಬಗೆ ಧರ್ಮ ಪುರುಷ!
ನಡೆನೀನೆ ಕಡುಕೋಪಿಗೊಳಿತು ಮಾತನು ಸಾರಿ
ಕೆಡುಕಾಗದಂತಿಹುದು ನಿನ್ನ ಕೆಲಸ!

ಧರ್ಮ—(ತಲೆದೂಗಿ)

ಅಂತಕ್ಕೆ! ಬೆದರದಿರು. ಪಿಸುಮಾತನಾಡಿ ಕಿ-
ತ್ತಡಿಯು ಬಗೆಯೊಲಿಸುವೆನು ಮೆಲ್ಲ ಮೆಲ್ಲ

ಮುಂತೆ ನೋಡಲ್ಲಿ– ಮನ್ಮಥನ ಬಿರುದಾವಳಿಯು
ಬಂತು ಮೇನಕೆಯೊಡನೆ– ಮಧುರ ಮೇಲ!

ವನದೇವತೆ—(ಸಂತೋಷದಿಂದ)
ಈ ರೂಪವೀಪೌರುಷವ ಕೂಡಿ ಗೆಲ್ಲಿಕ್ಕೆ
ಈ ಹರಣದಲಿ ಬೆಳಕು ತುಂಬಬರಲಿ!
ಕಾರಣದ ಬೆನ್ನೇರಿ ಬರುವ ಕೃತಿಯಂತೆ ಈ
ಸಂಯೋಗದಾವೇಗದ ತೀವ್ರತಿರಲಿ!
(ಇಬ್ಬರೂ ತೆರಳುವರು)
(ಸ್ವರ್ಗಸಖಿಯರು ಮೇನಕೆಯೊಡನೆ ಪ್ರವೇಶಿಸಿ)

ಮೇನಕೆ—
ಹೂವರಳಿದೆ ಮರಿದುಂಬಿಯು ಕಾದಿದೆ
ಬನ್ನಿರಿ ಗೆಳತಿಯರೆ!
ಮಾವಿನ ಸಿಹಿಯಲಿ ಬೇವಿನ ಕಹಿಯಲಿ
ಪರಿಮಳದೊಂದೆ ಹೊರೆ!

ಗಿಳಿಗಳ ತಮಟೆ– ಕೋಗಿಲೆ ಹರಟೆ
ಮೆಲುಮಾತಿನ ಕಾಜಾಣ
ಅಳಿಕುಲದಾಸೆ—ಗುಣುಗುಣುಗುಣಿಸೆ
ಬಂದನು ಕುಣಿತದ ಜಾಣ!
ಪಾದರ ಸಂಪಗೆ ಕುರಬಕ ಸುರಗೆ
ಎಲ್ಲಾ ಹೂವಿನ ಸಿಂಗಾರ
ಭುವಿಬಾನ್ ಮುಗಿಲು—ಹೊತ್ತಿದೆಸಾಲು
ಸಾಲಿನ ಸೊಗಸಿನ ಸಂಭಾರ!

ಬನ್ನಿರಿ ಸಖಿಯರೆ! ಬಾವನ್ನದ ಮಿದು
ಸೇದೆಯ ತಂಗಾಳಿ

ರತಿಕಾಮರ ವಿಧ ವಿಧದಾಟದ ಮಿಗ
ಬಳಗದ ರಸಕೇಳಿ!

ಸಖಿಯರು—

ಚೆಲುಮೇನಕೆ ಹೆಣ್ತನದನುರಾಗದ
ಸೌಗಂಧದ ಬಲೆ ಬೀಸಿಹಳು
ಈ ವನ ಭೂಮಿಕೆ ತಾಪಸಲೋಕಕೆ
ಹೊಸಸೃಷ್ಟಿಯ ನಗೆಯ್ಸಿಹಳು
ಕಡೆನೋಟದ ಹೂ ಬಾಣವನೆಸೆದಳು
ತೋರಿತು ಸುಂದರ ಸುರಚಾಪ
ದಡದಡಿಸಿತು ಕಿತ್ತಡಿಗಳ ಚೇತನ
ವಿಶ್ವಾಮಿತ್ರನ ಪುಣ್ಯತಪ!

ಹೋ ಹೊಸತಾಗಲಿ—ಹೋ ಸುಖವಾಗಲಿ
ಹೋ ಹೋ ಸುರತದ ಸಂತೋಷ
ಹೋ ರಸ ಜೀವನ ತುಂಬಲಿ ಹೋಹೋ
ಬಾಳಿನ ಹಿತಮಿತದಾವಾಸ!

(ಮುಂದೆ ನೋಡಿ)

ಮೇಲೆದ್ದನು ಮುನಿ—ಏನೀ ಸಂಯಮಿ
ನಮ್ಮಾಟಕೆ ಬಗೆ ಸೋಲ್ದಪನೆ?
ಈ ಸೌಂದರ್ಯದೆ ನಿರ್ಮಲ ಪೂರದೆ
ಮೈಮಿಾಯಲು ಬಗೆಗೊಳ್ದಪನೆ?

(ಮೇನಕೆಗೆ ಸುತ್ತು ಬಂದು ಕೈಯೆತ್ತಿ)

ಹಾಡಿರಿ ಖಗಗಳೆ ನಿಮ್ಮನುರಾಗದ
ತಮ್ಮಟೆ ತೂರಲಿ ದೆಸೆದೆಸೆಗೆ

ಹೂಡಿರಿ ಸೊಗಸಿನ ಸೆಳೆಯನು ಹೊಗಳೆ
ಈ ಗಳಿಗೆಯೆ ಸೋಲ್ಗೆಲವೆಮಗೆ!

(ಸಖಿಯರು ಮೇನಕೆಯನ್ನು ಬಿಟ್ಟು ಹಿಂದೆ ಸರಿಯುವರು. ವಿಶ್ವಾಮಿತ್ರನು ಪ್ರವೇಶಿಸಿ ಉದ್ವೇಗದಿಂದ)

ವಿಶ್ವಾಮಿತ್ರ—

ಏಂ ಮನಸಿನ ಮೃದುಕಾಮನೆ
ತಾನೆಳ್ಚರಗೊಂಡಿಹುದು
ಎಂದೋ ಕುಡಿಮುರಿದಾಸೆಯ
ಮೊಳಕೆಯು ಮೇಲ್ಗಂಡಿಹುದು
ಯೋಗಾಗಮಯಮನಿಯಮಂ
ಸಡಿಲಿದೆ ಹೃದಯಾಂಗಣದೆ
ತಲೆದೋರಿದೆ ಚಲಚಂಚಲ
ಚಾಪಲ್ಯದ ಸಿಡುಸೇದೆ!

(ಸುತ್ತಲೂ ನೋಡಿ ಮೇನಕೆಯನ್ನು ಕಂಡು ಆಶ್ಚರ್ಯದಿಂದ)

ಏನಚ್ಚರ ಏವದುಚ್ಚರ
ವೀಲೋಕಕೆ ಬಂದಂತೆ
ಸತ್ಕಾಮನೆ ಯಿಾಯೆಲೆವನೆ
ಯಲಿ ಸಾಕ್ಷಾತ್ ನಿಂದಂತೆ!
ತಳಿರೊತ್ತಿನ ತುಟಿಸಂಪುಟ
ನಗೆನೋಟದ ಮಾದಕತೆ
ನಳಿದೋಳ್ಗಳ ಬಲ್ಮೊಲೆಗಳ
ಮಮತೆಯ ಮಿದು ಮಾತುಕತೆ!

(ಮುಂದೆ ಒಂದು ಹೆಜ್ಜೆಯಿಟ್ಟು ಮತ್ತೆ ತಡೆದು)

ಈ ರೂಪದ ರಸವೇಃಖಿಲೆ
ಯಿದು ಮಾನುಷಗತವಲ್ಲ

ಈ ರಾಗದ ಹೊಸ ಸಂಕಲೆ—
ಯಿದುಮೋಹದ ಮಿದುಗಾಳ!

(ನಿಗ್ರಹದಿಂದ)

ತಡೆ ನಿಲ್ಲಿಸು ಕುಣಿದಾಟವ
ನಡೆ ಮುಂದಕೆ ಮನ್ಮನಸೆ!
ನಡೆನಡತೆಯ ಗುರಿಯಾವುದು?
ಬಿಡುಭೋಗದ ಬಯಲಾಸೆ!

(ವಿಶ್ವಾಮಿತ್ರನು ಮನಸ್ಸನ್ನು ನಿಗ್ರಹಿಸಿಕೊಂಡು ಮೇನಕೆಯನ್ನು ಮೀರಿ ತೆರಳುವನು)

ಮೇನಕೆ—(ದುಃಖದಿಂದ)

ಏನದ್ಭುತವೀ ತೇಜೋಮಂಡಲ
ಇದನೊಂದುವ ಮೈಮನದಾಸೆ
ನಿಷ್ಫಲವಾಯಿತೆ ಕೈಮೀರಿತೆ—ಸಿಡಿ
ಸಿಡಿಲನು ಹಿಡಿಯುವ ಹುಚ್ಚೈಸೆ!
ಅಂದೊಡೆಯನ ಹಿತಕಾಗಿಯೆ ಬಂದೆನು
ನಿಂದೆನು ದೇವರ ಕಾರಣಕೆ
ಇಂದೇನೆದೆಹೂ ತನಗಾಗಿಯೆ ತ
ತ್ಪರತೆಯೊಳೆರಗಿದೆ ಮುನಿಪದಕೆ!
ಗೆಲುವಿಕೆ ಸುರಪನ ಸೊತ್ತಾಗಲಿ ಈ
ಸೋಲ್ ಶರಣಾಗಿದೆ ಮನ್ಮನಕೆ
ಚೆಲುಹರಯದ ಸಾಫಲ್ಯದ ಸದ್ಗತಿ
ಹರಣಕೆ ಬಿಗಿಯದ ಬಾಳೇಕೆ?

(ವನದೇವತೆಯೊಡನೆ ಧರ್ಮ ಪುರುಷನ ಪ್ರವೇಶ. ಮೇನಕೆ ನಮಿಸುವಳು)

ಧರ್ಮ—(ಸ್ಮೈದಡವಿ)

ಸೈರಿಸು ಮೇನಕೆ ಸಾಕೀ ಚಿಂತೆ
ಏನಿದು ಮನಸಿನೊಳನುಮಾನ

ಯುಗಯುಗಸಿದ್ಧಿಯ ಪರಿಪರಿಮುಳಿಕೆ
ಸಾಲದು ಗಳಿಗೆಯ ಬಿನ್ನಾಣ!
ಕಾದಿಹ ಕಲ್ಲಿನ ಮೇಲ್ನವಿರೇಳಲು
ಕಾದಲ್ಮೆಯ ಮಳೆ ಸುರಿದಿರಲಿ
ವೇದನೆಯೊಳಮಾತಿನ ಮನ್ನಣೆಯಲಿ
ಚಾವಗೆ ಚಿರಂತನ ಕಾದಿರಲಿ!

ವನದೇವತೆ—

ಹೆಣ್ತನದಾಸೆಗೆ ಸಹನೆಯೆ ಕುಸುರನು
ಕೆತ್ತಿಹುದು—ತುಟಿಯೊತ್ತಿಹುದು
ಮುನ್ನೋಟದ ನವ ನಿರ್ಮಾಣಕೆ ಮೈ
ಬತ್ತಿಹುದು—ಬೆಂಬತ್ತಿಹುದು!

ಮೇನಕೆ—(ಕೈ ಮುಗಿದು)

ಎನ್ನಾಸೆಯು ಫಲಿಸುವುದೆ?
ಮನದರಳಿನ ತನಿಸೋನೆಯು
ನೈವೇದ್ಯಕೆ ಫಲಿಸುವುದೆ?
ಬಗೆ ಬೀಣೆಯ ಮೃದುಗುಂಜಿತ
ವಾರಾಧನೆಗೊದಗುವುದೆ?

ಇದು ಬಡತನವೀಮುಹತಿಯ
ಮಾನುಷ್ಯವನೊಲಿಸುವುದೆ?
ನದಿಯುಗುತಿಹ ಸೆಲೆನೀರಿದು
ಸಾಗರದಲಿ ಸೇರುವುದೆ?
ಎನ್ನಾಸೆಯು ಫಲಿಸುವುದೆ?

ಧರ್ಮ—

ನಿಂತಿರಿಲ್ಲೇ ವಿನಯದಲಿ
ಅಂತರಂಗದ ರಾಗದಲಿ

ಮಿಂದು ನೈ ಮುಡಿಗೊಂಡು ಬರಲಿಹ
ನಿಲ್ಲಿ ವಿಶ್ವಾಮಿತ್ರ ಮುನಿ
ಸುಂದರಾಂಗಿಯೆ – ನಿನ್ನ ಕಾಮನೆ
ಗೊಳಲವನ ಚೇತೋವನಿ!
ನಾನೆನುಡಿವೆನು ನಯದ ಮಾತಿಲಿ
ಇದೆ ಜಗದ ಸಂಪೂರ್ಣತೆ
ಶಿವವು ಸುಂದರದೊಡನೆ ಕೂಡುವ
ಧರ್ಮ ಕೃತಿಯುತ್ತೀರ್ಣತೆ!
ನಿಂತಿರಿಲ್ಲೇ ವಿನಯದಲಿ
ಅಂತರಂಗದ ರಾಗದಲಿ!
(ಇಬ್ಬರೂ ತೆರಳುವರು)

ಮೇನಕೆ—(ನಿಶ್ವಾಸ ಬಿಟ್ಟು)
ಕಾವೆನು ಕಾವೆನು ಕುಕಿಲಾಗಿ
ಕಾವೆನು ಬಾನಿನ ಶೂನ್ಯದಲಿ
ಕಾವೆನು ಕಾವೆನು ಬೆಳಕಾಗಿ
ಕಾವೆನು ಮೋಹದ ಕತ್ತಲಲಿ!
(ತೆರೆಯಲ್ಲಿ)
ನಯ ವಿವೇಚನೆ ಪುಣ್ಯರೋಚನೆ
ಯಾಗಲಿದೆ ಸತ್ಕಾಮನೆ
ಆದಕೊ ವಿಶ್ವಾಮಿತ್ರ ಮುನಿಪನು
ಬರುತಿಹನು ಗೆಲ್ ಕಾಮನೆ!
(ವಿಶ್ವಾಮಿತ್ರ ಮುನಿಯ ಪ್ರವೇಶ)

ವಿಶ್ವಾಮಿತ್ರ--
ದಡದಡಿಸುತಿದೆ ಮನಂ ತುಡುಕುತಿದೆ ಜೀವನಂ
ಸೆಳೆದಿಹುದು ತಾಮಸದ ಸಮ್ಮೋಹನಂ

ಅಡಿಗಡಿಗೆ ಕೇಳುತಿದೆ ಕಲಕಂಠನಿಸ್ವನಂ
ತಳಮಳಿಸುತಿದೆ ಹೃದಯುವವಳಧೀನಂ
    ಹಲವಾರು ಕೋಟಲೆಯ ದಾಂಟಿ ಬಂದಿಹ ತಪದ
    ಫಲವಿದೇನಿಂದು ಮೈಮಿದುವಾಗಿದೆ
    ಅವರಿವರನೆಲ್ಲ ಸುಟ್ಟುರೆಗೊಂಡ ಕಿಡುಕೋಪ
    ಮೂಡದಿದೆ. ಬಾಳಲತೆ ತಲೆದೂಗಿದೆ!

(ಮೇನಕೆಯೊಡನೆ)

ಏಕೆ ನಿಂದಿಹೆ ಸರಸಿ—ಚೆಲುಕಮ್ಮನೆಯ ಸೂಸಿ
ಮೋಹದೆಸಕದ ಬಲೆಯ ಬೀಸಿ ಬೀಸಿ
ಏನೊ ಬಗೆಯಭಿಲಾಷೆ ಹಣಕುತಿದೆ—ಕೆಣಕುತಿದೆ
ಕಾಮನೆಯ ಕೈಲಾಸದಮೃತರಾಶಿ!
    ನಾವು ಮುನಿಗಳು ಮನಸಿನಳತೆಯಳತೆಯ ನರಿತು
    ನೋಡಿ ಸಿಚ್ಚಳವಾಗಿ ನಡೆಯುವವರು
    ಈ ವಿಧದ ಲಾವಣ್ಯ ಸೇಚನೆಗೆ ನಮ್ಮ ಬಾಳ್
    ರೂಕ್ಷವಾಗಿದೆ ಚಿಗುರದಿರುವ ಬೇರು!

ಮೇನಕೆ—(ಕೈಮುಗಿದು ತಲೆಬಾಗಿ)
ಜೀಯ ತವಮ್ಮಾದರಕೆ ಬಂದಾಕೆ! ಹಾದರಕೆ
ನೆರೆದಾಕೆಯಲ್ಲ—ಬಾಳ್ ನಿಮ್ಮಧೀನ
ಗೆಲುವೊಳಕೆಯನುಚಿವುಟಿಕೊಲಬಾರದಯ್ಯನಿ
ಮ್ಮಪರಿಮಿತ ಪುಣ್ಯಕೀ ಜೀವದಾನ!
    ನಾನರಿತ ಕಲೆಬೇರೆ ಇಲ್ಲಿ ಕಂಡುದುಬೇರೆ
    ಈ ಬೇರೆ ಬೇರೆಗಳ ಬೆರಕೆಯಂತೆ
    ಸಾನುರಾಗವು ಹೂತು ಹಮ್ಮೈಸುತಿಹುದು. ನಿ
    ಮ್ಮಪರಿಮಿತ ಪುಣ್ಯದಲಿ ನನ್ನ ಹಣತೆ!

ಕೋಟಿ ಸೂರ್ಯರಕಂಡ ಬೆಳಕಿನಲಿ ಈ ಹಣತೆ
ಗಿಷ್ಟು ದೀಪ್ತಿಯು ಜಳಕವೀವ ಕರುಣೆ
ಸಾಟಿಯಿರದವ್ಯುತತ್ವದನುಗಮುದ ಸಿದ್ಧಿಯಲಿ
ನಟ್ಟಿಗೊಂದೆರಡು ಹನಿ ಸುರಿವ ಸಹನೆ!

(ನಮಸ್ಕರಿಸುವಳು)

ವಿಶ್ವಾಮಿತ್ರ—(ಒಮ್ಮೆ ಎತ್ತಿಹಿಡಿಯಲು ಕೈಮುಂದೊಡ್ಡಿ ಮತ್ತೆ ವಿವೇಕದಿಂದ ಹಿಂದೆಸರಿದು)

ಸಾಕು ಸಾಕೀ ಸೊಗಸಿನವತಾರ ಪುಣ್ಯಗಳ
ಪೂರ್ಣಾಹುತಿಯುಗೊಂಬ ಕಾಮುಸತ್ರ

(ಸ್ವಲ್ಪ ಸಿಡುಕಿನಿಂದ)

ನೀತೆರಳುತೆರಳು ನಿನಗೊಳ್ಳಿತಾಗದು ನಿಂತ
ರೀ ಕಡೆಯ ಬೆಂಕಿಯಲಿ ಸುಡುವ ಪತ್ರ!

ಮೇನಕೆ –

ಆದುದಾಗಲಿ. ಸುಟ್ಟಿರದುವೆ ಪುಣ್ಯಸ್ಫುರಣ
ದುದ್ಧಾರ ವಾತ್ಮಯಜ್ಞದ ಹವಿರ್ಭಾಗ
ಬರಿದೆ ಕಾಷ್ಠದಂತೆ ಸುಡುವ ಜೀವಿತವೇಕೆ?
ನಿಮ್ಮ ಪೌರುಷವೆ ನನಗಿರುವ ಭೋಗ!

(ಎಂದು ಕಾಲು ಮುಟ್ಟುವಳು)

ವಿಶ್ವಾಮಿತ್ರ—(ಕೋಪದಿಂದ ಕಾಲುದಟ್ಟಿಸಿ)

ಮನಸಿನುಕ್ಕಡವಿೂರಿ ಕೆಂಗಿಡಿಯು ಕಾರುತಿದೆ
ಕನಲುಗೆಂಡದ ಧರ್ಮ ಪದದವಜ್ಞೆ!

(ತೆರೆಯಲ್ಲಿ ಧರ್ಮ ಪುರುಷ)

ಏಂ ಧರ್ಮವಿದು? ಧರ್ಮ ವಾಯುಷ್ಯವಶ್ಯತೆಯ
ಸಾರ್ಥಕತೆ ಕೈಗೊಂಬುದೊಂದೆ ಸಂಜ್ಞೆ!

ವಿಶ್ವಾಮಿತ್ರ—(ಆಶ್ಚರ್ಯದಿಂದ ಹಿಂದೆ ನೋಡಿ)

ಯಾರಯ್ಯ ನೀನು? ನಮ್ಮಾಯುಷ. ಸುಲ್ಲೇಖ
ಕೊದಗಿ ಬಂದಿರುವ ಯಮಧರ್ಮರಾಯ!

ಧರ್ಮ—(ವನದೇವತೆಯೊಡನೆ ಮುಂದೆ ಬಂದು)

ನಾನೆ? ನಾಂ ವಿಶ್ವವಿನ್ಯಾಸಗಳ ನೆಲೆಸೆಲೆಯ
ಹಾಸು ಹೊರಸಿನ ಧರ್ಮ ಪುರುಷನಯ್ಯ!

ವಿಶ್ವಾಮಿತ್ರ—(ಕಾಲಿಗೆರಗಿ)

ಏನುಧರ್ಮಾಧರ್ಮದುಭಯ ಸಂಕಟವಾಯ್ತು
ಈ ಹೆಣ್ಣಮೋಹನದಿ ಯಿತ್ತಡಿಯಲಿ
ನೀನೆ ಸಲಹಯ್ಯ, ತಪಸೊಂದೆ ನಮ್ಮೆಣಿಕೆ. ಮ
ತ್ತದಕಾಗಿ ಬಾಳುವೆವು ಸಂಯಮದಲಿ

ಧರ್ಮ— (ವಿಶ್ವಾಮಿತ್ರನನ್ನು ಎತ್ತಿ ತಬ್ಬಿಕೊಂಡು)

ಭಳಿರೆ ವಿಶ್ವಾಮಿತ್ರ ! ತಪಸು ಸಾರ್ಥಕವಾಯ್ತು
ತಿಳಿ ಮನಸಿನರಿವಾಯ್ತು ಸಾಕು ಸಾಕು
ಒಳಿತು ಕಡೆ ಮುನ್ನೋಟ ವೈಸಿ ಬಂದಿಹೆನಿಲ್ಲಿ
ಉಳಿದುದೊಂದನು ನೀನೆ ಸಲಿಸಬೇಕು

ಇದು ತಪದ ಸೋಲಲ್ಲ ಧರ್ಮದಾಣತಿಗಾಗಿ
ಸೆಳವಿನಲಿ ಸಾಗುತಿಹ ಸತ್ತ್ವವೃತ್ತಿ
ಇದು ನಿನ್ನ ಬಾಳಿಕೆಯ ಗೆಲವು. ವಿಶ್ವಾಮಿತ್ರ
ನೆಂಬ ವಿಶ್ವತೆಯ ಗುರುತರದ ಮಹತಿ!

ಈ ಯಮಾನುಷ ಲಸಲ್ಲೀಖೆಯಲಿ ನಿನ್ನ ಸು
ಸ್ಫುರಣ ಸಾವಿತ್ರಿಯಂತುದಿಸಬೇಕು
ಈಪಾತ್ರದಲಿ ನಿನ್ನ ಪುಣ್ಯಸಂಗವು ಜಗುಳಿ
ಭಾರತದ ಭವಿತವ್ಯ ಬೆಳಗಬೇಕು !

ನೋಡು ನೋಡತ್ತಕಡೆ – ಹೊಳೆ ಬಯಲುಬಾನೆಲ್ಲ
ಏನೊ ಹಿತಕಾಗಿ ಕಾದಿರುವ ಕೂಸು
ಬೇಡುತಿದೆ ಭೂಲೋಕ—ಧರ್ಮ ಸಂಪುಟದಲ್ಲಿ
ಬರೆದ ಬರಹವನೋದಿ ಕೃತಿಯನೈಸು!

ವನದೇವತೆ—(ಮೇನಕೆಯನ್ನು ತಬ್ಬಿಕೊಂಡು)
ಮಗಳೆ ಮೇನಕೆ ಬಾರೆ! ನಿನ್ನ ಸದ್ಭಾವನೆಯ
ಮಧುರ ಸಂಪರ್ಕದಲಿ ಸೊದೆಯೊದಗಲಿ
ಜಗದ ಚಿತ್ತಾಂಬುಧಿಯ ಚಾರುಚಾರಿತ್ರ್ಯದಲಿ
ಸೊದೆವಿಡಿದ ಸಿರಿಯು ತಾನುದ್ಭವಿಸಲಿ!

(ವಿಶ್ವಾಮಿತ್ರ ಕ್ಷಣಕಾಲ ಕಣ್ಮುಚ್ಚಿಯೋಚಿಸಿ ಕೊನೆಗೆ ಎಚ್ಚರಗೊಂಡು ಧರ್ಮ ಪುರುಷನಿಗೆ ನಮಸ್ಕರಿಸುವನು. ಮೇನಕೆಯೂ ನಮಸ್ಕರಿಸುವಳು)

ವಿಶ್ವಾಮಿತ್ರ— ಆತ್ಮದುದ್ಧಾರವಾಯ್ತೆಂದು ಹುಮ್ಮಸವಳಿದು
ಓಂ ನಮಃ ಶರಣು ಧರ್ಮಾಧಿದೇವ!
ಏನೊ ತಿರುಮುರುವು ನಿರ್ಮಾಣದಲಿ ಬರಿದೆ ಬೆಂ
ಡಾಯ್ತು ಕರ್ತವ್ಯತಾಶೂನ್ಯಭಾವ!

(ಧರ್ಮ ಪುರುಷನು ಆಶೀರ್ವದಿಸಿ ವನದೇವತೆಯೊಡನೆ ತೆರಳುವನು. ವಿಶ್ವಾಮಿತ್ರನು ಎದ್ದು ಮೇನಕೆಯ ಕೈಹಿಡಿದು)

ಎದ್ದೇಳು ಭಾಮಿನಿ ಮನಂಗೊಳುವ ಯಾಗದಲಿ
ನಿನ್ನ ವೇದಿಕೆಯ ಪರಮಾಧಿಕಾರ
ಶುದ್ಧಭಾವದ ಸುಕೃತ ಶೀಲತೆಯ ರಂಗದಲಿ
ನಿನ್ನ ಗೆಲವೇ ಭವದ ಸದ್ವಿಚಾರ !

ಸ್ವರ್ಗಸಖಿಯರು— (ಪ್ರವೇಶಿಸಿ ಹಾಡುತ್ತಾ ಕುಣಿಯುತ್ತಾ ಸುತ್ತು ಬರುವರು)
ಹೂವರಳಿದೆ ಚೆಲುದುಂಬಿಯು ಕಾದಿದೆ
ಬನ್ನಿರಿ ಗೆಳತಿಯರೆ !
ಮಾವಿನ ಸಿಹಿಯಲಿ ಬೇವಿನ ಕಹಿಯಲಿ
ಪರಿಮಳದೊಂದೆಹೊರೆ !

ಆಕಾಶವೆ ನಗೆಯೂಡಿದ ಹಾಸುಗೆ
ಬದುಕೇ ತೂರಿದ ಗಾಳಿಪಟ

ಮಮತೆಯ ಮೇದುರ ಹಿಡಿತದವಾಗುರ
ವಾಗಲಿ ಮೇನಕೆಯೊಡನಾಟ!

ಸೋತವನೇ ಗೆಲ್ಗೊಂಬನು ಗೈಮೆಗೆ
ಸಿಕ್ಕಿತು ಸಗ್ಗದ ಸಿರಿಸೋನೆ
ಪ್ರೀತಿಯ ಕಣದಲಿ ಕುಣಿದಾಡುವ ಹೆಣ್
ಬಯಕೆಯ ಭವಿಷ್ಯದುದ್ಧರಣೆ!

ಹಾಡಿರಿ! ಈ ಸಂತಾನದ ಸೌಸವ
ಹರಡಲಿ ಬಾಂದಳದೆತ್ತರಕೆ
ಹಾಡಿರಿ! ಸುಖಸಾಮ್ರಾಜ್ಯದ ಮೇರೆಯು
ಮಿಗಲಿ ಹಿಮಾಲಯದುತ್ತರಕೆ!

ಸಮಸ್ತಲೋಕದೆ ಮೆರೆದಿಹುದೊಂದೇ
ಸುಂದರ ಜಂಬೂದ್ವೀಪವಿದು
ಪ್ರಶಸ್ತ ಜಂಬೂದ್ವೀಪವನಾಳಲು
ಬರುವನು ಭರತನು ಮೇಲೆದ್ದು!

ಭಾರತ ವರ್ಷ—ಭಾರತ ಹರ್ಷ
ಭಾರತ ಕುಲನೆಲದುದ್ಧಾರ!
ಭಾರತಕಾಗಿಯೆ ಸುರಸಂಕಲ್ಪದ
ನಚ್ಚಿನ ಮೇನಕೆಯವತಾರ!

ಹೂವರಳಿದೆ ಕರ್ದುಂಬಿಯು ಕಾದಿದೆ
ಬನ್ನಿರಿ ಗೆಳತಿಯರೆ!
ಮಲ್ಲಿಗೆ ಮಾವಿನ ಮೇಳಕೆ ಬಳುವಳಿ
ತನ್ನಿರಿ ಗೆಳತಿಯರೆ!

ಹೋ ಹೊಸತಾಗಲಿ– ಹೋ ಸುಖಸಾಗಲಿ
ಹೋ ಹೋ ಸಮಗ್ರ ಸಂತೋಷ
ಹೋ ರಸಜೀವನ ಸಮೃದ್ಧವಾಗಲಿ
ಹೋ ಹೋ ಮಂಗಳ ಸಹವಾಸ!

೧೩—೧೨—೧೯೫೬

ಮಿಲನ ರಾತ್ರಿ

ಪಾತ್ರವರ್ಗ

ಚಾರುಮತಿ

ಚಂದ್ರಮುಖಿ

ತಾರೆ

ಚಂದ್ರ

(ಸಂಧ್ಯಾಕಾಲ ದೇವಲೋಕದ ಉಪವನದಲ್ಲಿ ತಾರೆಯು ಸಖಿಯರು ಪ್ರವೇಶಿಸಿ)

ಚಾರುಮತಿ— ನೋಡುಸಖಿ ಗಂಭೀರಗತಿಯಲಿ
ಬಂದಿಹುದು ಸುಶ್ರಾವಣ
ಮೋಡಮೋಡಗಳೆಡೆಯ ಸೂಳಿಲಿ
ಚಿಗಿದ ಮಿಂಚಿನ ತೋರಣ

ಹಾಡು ಹಕ್ಕಿಗಳಮೃತ ಕೂಜನ
ದಮರತೆಯ ವೃಂದಾವನ
ಜೋಡುಬದುಕಿನ ಯೋಗಭೋಗದ
ಭಾವನೆಯ ಸಮ್ಮಿಶ್ರಣ

ಹಸಿರು ಹಚ್ಚನೆ ಹಾಸಿನಲಿಬಗೆ
ಬಗೆಯ ರಂಗಿನಚಿತ್ರಣ
ಬಿಸಿಲಕೈಯಲಿ ತಾಕಲಾಡುವ
ತೂಗುಬಳ್ಳಿಗಳೋರಣ

ಎಸಳ ತುಟಿಯಲಿ ಬಾಸಣಿಸಿ ರಸ
ಬೆಸೆವ ಗಂಧ ಸಮೀರಣ
ಕುಸುರು ಲಜ್ಜೆಯ ಮುಸುಕು ಜಾಡಿಸಿ
ಬಂದಿಹುದು ಸುಶ್ರಾವಣ!

ಚಂದ್ರಮುಖಿ-- ನೋಡದೋ ಮುದ್ದಿಟ್ಟು ಮಿಡುಕದ
ಪಾತರದ ಪುಷ್ಪಾರ್ಚನೆ
ಕೋಡ ಕೋಡಿಗೆ ಕೂಡಿ ಕಂಗಳ
ಮುಗಿದ ಮಿಗಗಳ ಸೂಚನೆ

ಬೇಡದೆಯೆ ಬೆನ್ನಟ್ಟಿ ಬಹ ಬಂ
ಡುಣಿಯ ನರ್ಮ ವಿವೇಚನೆ
ನೀಡು ನೀಡೆಂದೊದರಿ ಕೂಗುವ
ಮಧುರ ಕಾಮದ ಯಾಚನೆ

ಸೋರುಮಳೆ ಮಾಲಿನ್ಯ ಕಳೆದಿದೆ
ನಿರ್ಮಲದ ರಸರಂಜನೆ
ಕಾರಕತ್ತಲೆ ಕಳೆದಿಹುದು ಸಿಂ
ಗಾರ ಸೊಗಸಿನ ಪಾರಣೆ

ದೂರದೇಶದನಲ್ಲನೆದೆಯಲಿ
ಕಾಮನೂರಿದ ಹೂಗಣೆ
ಓರೆ ನೋಟದ ಬೇಟದಲಿ ಮನ
ಗಂಡ ಮಮತೆಯ ಮನ್ನಣೆ

ಚಾರುಮತಿ—(ಮುಂದೆನೋಡಿ)
ಹಿಡಿತವಿರದ ಗಾಳಿಪಟ
ತೂರುತಿಹುದು ನೋಡೆಸಖಿ!
ಇದೇ ಬಾಳ ಕುಣಿದಾಟ
ಏನು ಸೊಗಸು ಚಂದ್ರಮುಖಿ!

ಹರಯ ಹುಮ್ಮನನುರಾಗ
ಜಲಪಾತದ ಧಿಮಿಧಿಮಿತ

ಹುಚ್ಚುಬಯಕೆ ಹಾವಸೆಯಲಿ
ಅದನು ದಾಂಟಲಿರುವ ಚಿತ್ತ!

ಚಂದ್ರಮುಖಿ— ಬಿಗಿತವಿಲ್ಲದೀ ಕುದುರೆ
ನೆಗೆದಿರುವುದು ನೋಡೆ ಸಖಿ!
ಅದನೇರುವ ಕಲಿರಾವುತ
ಎಲ್ಲಿಹನೋ ಚಾರುಮತಿ!

ಹರಯವೊಂದು ತುಂಬುಗೊಡಡ
ಹಾಲಿನಂತ ಜೀವಾಳ
ಅದನು ಕಡೆದು ಸೊದೆಯನುಣ್ಣ
ದಿರಲದು ಹಾಲಾಹಲ!

ಚಾರುಮತಿ— ಬಿಗಿದ ತಂತಿ ಭವ್ಯನಾದ
ಕಾಗಿ ಕಾಯಬೇಕೆ?
ಬೆರಳ ಸೋಂಕಿನೊಂದು ಮಿಡಿತ
ವಿನ್ನು ಬಾರದೇಕೆ?

ದುಃಖದೈನ್ಯದಾರ್ತತೆಯಲಿ
ಕರಗಿದಂತ ಜೀವ
ಕಣ್ಣನೀರ ಕಾಲುವೆಯಲಿ
ಕೊನೆಗೊಂಬ ಮನೋಭವ!

ಚಂದ್ರಮುಖಿ—(ಅಪಹಾಸ್ಯವಾಗಿ)
ಮುದುಕನವಗೆ ಮಡದಿಯೇಕೆ
ಮಂಗನಿಗೆ ಮಾಣಿಕ್ಯ!
ಎರಡು ಮನಸು ಕೂಡದಿರಲು
ಎಲ್ಲಿ ಜೀವದೈಕ್ಯ?

ಶುಕ್ರವಾರ ಪೂಜೆಯಂತೆ
ಬಾರದಿರುವ ಗಂಡು
ಇದೇ ವರುಷವರುಷವೆಲ್ಲ
ತೀರದಿರುವ ಹಾಡು!

ಚಾರುಮತಿ — ಸಹಜಮೀಮಾತು ಕಳೆದೆಸಕ ನೆನಪಾಗುತಿದೆ
ಸಂತಸವ ತಳ್ಕೆಯಲಿ ಬೆಳೆದ ಕನ್ನೆ
ಈ ತಾರೆ ಹೊಂಗದಿರೆ ರೂಹುಗೊಂಡಂತೆ ಮನೆ
ಮಾಳಿಗೆಯ ಬೆಳಗಿರುವ ಸುಸಂಪನ್ನೆ

ಒಂದೊಮ್ಮೆ ಸಿರಿಮೊಗದ ಪಡಿನೆಳಲಕಂಡು ಕೈ
ಗನ್ನಡಿಯಲೇಕೊ ನಲಿದಾಡುವನ್ನ
ತಿಂಗಳನ ಚೆಲುಬಿಂಬ ಮೂಡಿರಲು ಮಿಮುಗೆನ್ನೆ
ನಾಚಿ ಸಾರೂಪ್ಯದಲಿ ಹೊಸೆವ ಚಿನ್ನ

ಅಂದಿನಿಂದಿನ್ನೆವರವೇನೊ ಚಂದ್ರಾಲೋಕ
ಕಾಗಿ ಕರೆಕರೆವ ಕರುಣಾರ್ದ್ರಚಿತ್ತ
ಚಂದ್ರನೆಂದೇ ಚಿರಂತನಸೊರಗಿ ಕೊರಗಿ ಮೈ
ಬತ್ತಿಬೆಂಡಾಗುತಿಹ ಬಾಳಕುತ್ತ

ಹರೆಯಮೇರಲು ಚಿಂತೆ ಕವಿದ ಹಿರಿಯರ ಮುಂತೆ
ಬಂದನೇಕೀ ಮುದಿ ಕುಲಪುರೋಹಿತ
ನೆರೆದ ಹೆಣ್ಣನುಕಂಡು ಪಾರ್ಶ್ವಗಾಯಿತು ಗಂಡು
ತನದನುಭವಂ ಅದೇ ಬಂದ ದುರಿತ!

ದಿನದಿನವು ಕನವರಿಸಿ ಕೂಗುತಿಹ ಕಾತರ್ಯ
ದನುರೋಧದಲಿ ನಿಚ್ಚನವೆವ ಹೆಣ್ಣು
ಘನಗೊಂಡ ಹೋಮ ಹವಿಸಿನಹೊಗೆಯಹಾರಾಟ
ದೆಡೆಯೊಳುದುರಿತು ಕೈಗೆ ಬಲಿತ ಹಣ್ಣು!

ಕುಲಗುರು ಬೃಹಸ್ಪತಿಯು ವಾಂಛಿತಕೆ ತಲೆಬಾಗಿ
ಭೀತಿಯಲಿ ತೊಡಗಿದ ವಿವಾಹಶಾಂತಿ
ದೇವರ್ಕಳಾಗ್ರಹಂಕೂಡಿ ಚಂದ್ರಾರಿಷ್ಟ
ಪೀಡೆಗಾಯಿತು ಮಗಳ ಪೂರ್ಣಾಹುತಿ!

ಚಂದ್ರಮುಖಿ-- ಏಂ ದುರಾಚಾರವಿದು! ಬೆಳೆದಮನಸಿನ ಮಲರ
ಪರಿಮಳಕೆ ಬೆಲೆಯಿಲ್ಲವೇಂ ವಿಚಿತ್ರ !
ಒಂದು ಕಡೆ ಸರಿದ ಬಳ್ಳಿಯ ಚಿಗುರ ಚಿವುಟ ಮ
ತ್ತೊಂದು ಕಡೆ ಕೂಡಿಸುವುದೇಂ ಪವಿತ್ರ?

ಅಯ್ಯೊ ಬಗೆಗರಗುತಿದೆ ದುಮ್ಮಾನವೆರಗುತಿದೆ
ಗುರುತನದ ಗೌರವದ ದುಷ್ಪ್ರವೃತ್ತಿ
ಹೊಯ್ಯೊ ! ಗುರುವಾದರೇನಾರಾದರೇನು ಮುಂ
ಗೊಂಡಕಡೆ ಸರಿಸಾಗುವವಳೆ ಗರತಿ

ಚಾರುಮತಿ— ಇದು ನಡೆದ ವಿನ್ಯಾಸ. ಇವಕಾಯಿತು ನ್ಯಾಸ
ವೀ ಹೆಣ್ಣುತನದ ಬಳುವಳಿಯ ಬಾಳು
ಇದು ಬರೇ ತೊಡಗಿರುವ ನಾಂದಿ—ಭವನಾಟಕದ
ವಿಷಮ ವಿಷಯಾಶಯದ ನಿತ್ಯಗೋಳು!

ದಿನದ ನಿಯಮಕೆ ಸೋತ ಹರಣಮಿಸುಕಾಡಿದರೆ
ಇರುಳು ಕಟ್ಟೊಡೆದಂತೆ ಕರೆವ ಕೋಕಿ
ಕಡಲ ಪೆರ್ಚುಗೆಯಂತೆ ಬಗೆತುಂಬಿತೀವಿದರೆ
ಕಣ್ಣನೈದಿಲೆಯರಳೆ ಕಾಂಬಕಿಟಕಿ!

ಚಂದ್ರಮುಖಿ— (ಸಿಟ್ಟಿನಿಂದ)
ಸಾಕು ಬಿಡು ಸಂಸಾರದೀ ಮಮತೆಯುಪಚಾರ
ದಾ ಕಡೆಗೆ ಸತ್ಯದ ಸಹಾನುಭೂತಿ
ನಾಕವಲ್ಲವಿದೇನೊ ನರಕ ನರಳಾಟದಲಿ
ಶೋಕ ತುಂಬಿದ ವಿರಸ ವಿಷಸ್ಫೂರ್ತಿ !

ನಲ್ಮೆಗೆಲ್ಲಿ ಕ್ಕೆ ! ಈ ರೂಪರಸವೊಂದಾಗಿ
ಬದುಕು ಬೆಣ್ಣೆಯ ಭಾಗ್ಯ ತೇಲಿಬರಲಿ
ಒಮ್ಮೆ ತಾರೆಯು ತಪದ ಪುಣ್ಯಸಿದ್ಧಿಗೆ ಸಂದು
ಸೌಭಾಗ್ಯ ಚಂದ್ರನಲಿ ಸೇರುತಿರಲಿ !

(ಮುಂದೆ ನೋಡಿ)

ಅದೊ ಬಂದಳು ಚೆಲುಚಂದ್ರಿಕೆ ತಾರೆ
ರಸಸಾಕಲ್ಯದ ಸುಮನೋಹರೆ
ಶರದಾರಂಭದ ಮಂಗಳಧಾರೆ
ಚಿರದುಃಖಿತ ವಿರಹ ಧ್ರುವತಾರೆ!

ಚಾರುಮತಿ—(ಆಶ್ಚರ್ಯದಿಂದ)

ಏನಿಂದುಟ್ಟಿಹ ನಿರ್ಮಲವಸನ
ಎಂದಿಲ್ಲದ ನವರತ್ನ ವಿಭೂಷಣ
ತಾನೇ ನಗೆನಗೆಯಾಡುವ ನಯನ
ಏನನೊ ಮುಂಗಾಣುತಲಿರುವ ಮನ

ಏಂ ಸೊಗಸಿದು! ಚಿರ ನಯನಾನಂದದ
ತೋರುತಲಿದೆ ಮನ್ಮಥ ಪರಿವಾರ
ಏಂಗನಸೋ! ಕಲಹಂಸಿಯು ಮಾನಸ
ಲೋಕಕೆ ಸಾರುವ ಸುಖದಭಿಸಾರ!

ಚಂದ್ರಮುಖಿ—

ಬಾ ಸಖಿ! ಮಂಗಲ ಮಾನಸ ಪೂಜೆಗೆ
ಕುಯ್ಯುವ ಹೂವಿನ ಹೊರೆಹೊರೆಯು
ಏನೋ ದಿವ್ಯತೆಗೊದಗುವ ಸೇವೆಯು
ಸಿಂಗಾರದ ಸಿರಿಯನುಮೇಯ!

ತಾರೆ – (ಅಭಿಸಾರಿಕೆಯಂತೆ ದಿವ್ಯವಸ್ತ್ರ ವಿಭೂಷಿತೆಯಾಗಿ ದು:ಖದಿಂದ)

ಮೊದಲ ಕಿರಣಕಾಗಿ ಕರೆವ ಕುಕಿಲಿನಂತೆ
ಹಾಡಿಹಾಡಿ ಗೋಳಾಡುತಿರುವೆನು
ಭವ್ಯ ದಿವದ ಬೆಳಕು ಮನೆಯ ಸೇರಲೆಂದು
ಎದೆಯ ಮುಸುಕನೆತ್ತಿ ನೋಡುತಿರುವೆನು

ಮೊದಲ ಮಮತೆಗಾಗಿ ಮೊದಲಗಿತ್ತಿಯಂತೆ
ಹಗುರ ಹೆಜ್ಜೆಗೊಂಡು ಹೀಡುತಿರುವೆನು
ಮೊದಲ ಮುತ್ತಿಗಾಗಿ ನಸುಕಿನಲರಿನಂತೆ
ಎಸಳು ತುಟಿಯನೆತ್ತಿ ಬೇಡುತಿರುವೆನು

ಏನೊ ಸುಖದ ಬೆರಳು ಮನಸು ಮೀಟಲೆಂದು
ಬರುವ ಹೊತ್ತಿಗಾಗಿ ಕಾಯುತಿರುವೆನು
ನಿನ್ನ ತಣ್ಪುನಗೆಯ ನೆರವು ತುಂಬಲೆಂದು
ಎದೆಯ ಬಟ್ಟಲಿಟ್ಟು ನೋಯುತಿರುವೆನು

ಯಾರು ಮೂಸದಿರುವ ಪ್ರಣಯಪಾರಿಜಾತ
ನಿನ್ನ ಪೂಜೆಗೆಂದು ಕೂಡುತಿರುವೆನು
ಯಾರು ಸವಿಯದಿರುವ ಹೆಣ್ಣುತನದಹಣ್ಣು
ನಿನಗೆ ಮೀಸಲೆಂದು ನೀಡುತಿರುವೆನು

ಈಸು ದಿನದ ನಿಯಮನೋಂಪಿನುಸಿರು ಹೊಯ್ದು
ಕಣ್ಣನೀರಿನೊರತೆ ನಿನಗೆ ಸೇರದೆ?
ಬೀಸುವೆಲರುಹೊತ್ತ ಬೇನೆಯೊಡಲು ಸುಯ್ದು
ತಿಣ್ಣ ತುಟಿಯ ಚಿಂತೆ ಮನಕೆಬಾರದೆ?

(ನಿಟ್ಟುಸಿರು ಬಿಟ್ಟು)

ಹೆರರ ಹೆಣ್ಣ ಕಣ್ಣ ಕುಣಿತಸಲ್ಲದೆಂದು
ಮಮತೆಗೊಂಬ ಹೆಜ್ಜೆ ಹಿಂದೆ ಸರಿಮದೆ?

ಪರರ ಹೆಣ್ಣದಲ್ಲ—ಯಾರೊ ತಿಳಿಯದಂತೆ
ಕದ್ದ ನಿನ್ನ ಸೊತ್ತು—ನಿತ್ಯ ನಿನ್ನದೆ!

ಚಾರುಮತಿ—(ಇದಿರು ಬಂದು ಕೈಹಿಡಿದು)

ದಿನವಿದೇ ನಡೆದಿರುವ ಚಿಂತನೆ
ಕಾಣದೂರಿನ ಕಲ್ಪನೆ
ಎತ್ತಲೋ ಚೆಲ್ಲಿರುವ ಹಾಲಿಗೆ
ಏಕೆ ಮರುಗುವೆ ಸುಮ್ಮನೆ?

ಸೋಣಮಾಸದ ಪುಷ್ಪಹಾಸದ
ವಿವಿಧತೆಯು ಚೆಲು ತುಂಬಿದೆ
ನಮ್ಮ ಪೂಜೆಯ ಪೂರ್ಣತೆಗೆ ಮು
ಚ್ಚಂಜೆ ಕಳೆಯುತ ಬಂದಿದೆ

ಒಲವು ಗೆಲವಿನ ಪರಿಚಯಕೆ ತಂ
ಗಾಳಿಯುಸಿಕನೆ ನಿಂತಿಗೆ
ಚೆಲುವು ತುಂಬಿರುವನಕ ತೀರದ
ಲಾಲಸೆಯು ತಲೆಯೆತ್ತಿದೆ

ನೋಡು ಹಲಹದಿನೆಂಟು ಸಾವಿರ
ಕಾಮನೆಯ ಕಿಡಿಯೆದ್ದಿದೆ
(ತಾರೆಯ ಮುಖವನ್ನೇ ದಿಟ್ಟಿಸುತ್ತಾ)
ಬೇಡುತಿಹ ನಿನ್ನೆರಡು ಕಂಗಳ
ಲೇನೊ ಹುಮ್ಮಸವದ್ದಿದೆ!

ತಾರೆ—(ನಾಚುಗೆಯಿಂದ ಮೆಲ್ಲನೆ)

ಅಹುದೇನೊ ಸಂತಸದ ಸೌಭಾಗ್ಯಸಾಧನೆಗೆ
ನವಿಲಾಗಿ ಕುಣಿಯುತಿದೆ ವಾಮದೃಷ್ಟಿ
ಬಹಸುಖದ ಸರತಿಯನು ಸಾರುತಿಹುದೆಂಬಂತೆ
ತೋಳು ತೊನೆದಾಡುತಿದೆ ಸುಖದ ಸೃಷ್ಟಿ

ಎಂದು ಸೇರದ ಸಗ್ಗ ಸಿಂಗಾರವಾಗುತಿದೆ
ಎಂದು ಮೂಡದ ಮನಸಿನಾತ್ಮೀಯತೆ
ಇಂದೇನೊ ಕನಸು ಕಟ್ಟಲೆದಾಟ ಜಾಗೃತಿಯ
ಬಾನ್‌ಬಯಲ ಮೇಲೆ ಸುಳಿಯುವ ಸಹಜತೆ!

ಚಂದ್ರಮುಖಿ (ವಿಶ್ವಾಸವಾಗಿ ನಿಟುಗೆ ತೆಗೆದು)

ಆಸೆಯತಿಶಯದ ವಿಶ್ವಾಸ ನಿಶ್ವಾಸದಲಿ
ಕೊನೆಯಾಗದಿರಲಿ ತುಟಿಗೋಲಿದ ತುತ್ತು
ಮೂಸೆಯಲಿ ಹೊಯ್ದಿರುವ ಬಂಗಾರ ಕೈಜಾರ
ದಿರಲಿ--ಮರುಕಳಿಸುತಿಹ ಮಹಾಪತ್ತು !

ತಾರೆ—(ಸಿರ್ಧಾರವಾಗಿ ಕೈಹೊಸೆದು)

ಇಂದೆಮ್ಮ ಪೂಜೆ ಕೊನೆಯೋಜೆಯಾಗಲೆ ಬೇಕು
ಇದೆ ನನ್ನ ಜೀವಿತದ ಹಂಸಗಾನ
ಇಂದು ಬಾರದ ಸಿದ್ಧಿಯೆಂದು ಬಂದರದೇನು?
ಇಂದೆನಗೆ ದುರಿತ ದುಃಖಾವಸಾನ !

ಚಾರುಮತಿ—(ದುಃಖದಿಂದ)

ಆಡದಿರು ಬರಿದೆ ಮಿಡುಕಾಡದಿರು ಗೆಳತಿ ! ಬಿಲ್
ಹೂಡಿದಸ್ತ್ರವು ತಾಗದಿರುವ ಹದನ
ಕಾಡಿ ಶಿವನನು ಮಲೆತು ಹೂಗಣೆಯನೆಸೆದು ಕೈ
ಮಾಡಿ ಸತ್ತರು ಗೆದ್ದನವನೆ ಮದನ !

ಹಸಿವು ತೀರದ ಹರಣ ಕುಡಿಕೆ ತೀರದ ಬುತ್ತಿ
ಯಿದಕಾಗಿ ಸುತ್ತುತಿದೆ ಲೋಕ ಲೋಕ
ಹೊಸತು ಹಳೆತನವನೋಸರಿಸಿ ಕೈಗೂಡುತಿಹು
ದಾದ್ಯಂತವಿರದ ಕರ್ಮಾನುಪಾಕ !

ಚಂದ್ರಮುಖಿ—(ಆಕಾಶದ ಕಡೆನೋಡಿ ಕೈಯೆತ್ತಿ ಉತ್ಸಾಹದಿಂದ)

ಸುಶ್ರಾವಣದಮೃತರಾಶಿ
ಬಂದಿಹುದು ಕೈ ಬೀಸಿಬೀಸಿ
ನಲುಮೆ ತುಂಬಿದೊಸಗೆಯೈಸಿ
ರಸಗಂಗೆಯ ಸೂಸಿ ಸೂಸಿ

ಸಂತೋಷದ ಸೆರಗು ಹಾಸಿ
ಬೆಳ್ಮೋಡದ ಬಲೆಯ ಬೀಸಿ
ಭುವಿಯ ಬಯಕೆಗಳನು ಹರಸಿ
ನಿಶೆಯ ನರ್ಮದುಡೆಯ ಸರಿಸಿ

ಸ್ಫುರದ್ಕಿರಣದಮೃತರಾಶಿ
ಬಂದಿರುವನದೋ ಶಶಿ!

ತಾರೆ—(ಧಿಗ್ಗನೆದ್ದು ಸಂಭ್ರಮದಿಂದ ಕೈಯೆತ್ತಿ)

ವಿಕಾರಮನದಲಿ ಚಕೋರಿಕರೆವಳು
ಚಂದ್ರ ಬಾರೊ ಚೆಲುರಾಜ
ವಿಕಾಸ ಸೃಷ್ಟಿಯ ಸಕಾಲತುಷ್ಟಿಗೆ
ಕಾದಿಹಳೋ ರಸರಾಜ!

ಅಬೋಧ ಹೃದಯದ ನಿಗೂಢ ಮಮತೆಯ
ಮುಂಬಾಗಿಲ ತೆರೆದಿಹಳು
ಅಪಾರ ವಿರಹದ ನಿಪಾತದುಃಖದ
ದುರಿತಕೆ ಮೈಮರೆತಿಹಳು

ವಿಕಾರಮನದಲಿ ಚಕೋರಿ ಕರೆವಳು
ಚಂದ್ರಬಾರೊ ಚೆಲುರಾಜ
ಸುಧಾಸಮುಷ್ಟಿಯ ಸಕಾಲವೃಷ್ಟಿಗೆ
ಕಾದಿಹಳೋ ರಸರಾಜ!

(ಉದ್ವೇಗದಿಂದ ಮುಂದೋಡಿ ಮೂರ್ಛಿತಳಾಗುವಳು. ಸಖಿಯರು ಗಾಬರಿಯಿಂದ ತೊಡೆಯಮೇಲಿರಿಸಿ ಕೊಂಡು ಉಪಚರಿಸುವರು)

ಚಾರುಮತಿ—

ಏಂಗಾಲವಿದು! ವಿರಹದುಃಖದಾಹುತಿಗಾಗಿ
ಬೇಕಾಯ್ತೆ ಹೆಂಗರುಳ ಬಲಿತರ್ಪಣ
ಮುಂಗಾಣದಿಹುದಕಟ—ಎದ್ದೇಳು ಗೆಳತಿ! ಯೀ
ಮುಗ್ಧತೆಯ ಮಲ್ಲಿಗೆಗು ಬಂತೆ ಮರಣ!

ಚಂದ್ರದೇವ—(ಪ್ರವೇಶಿಸಿ ವಿಚಾರವಾಗಿ)

ಇಷ್ಟುದಿನವಿವಳ ಸೆಳೆಸಿಟ್ಟು ಸಿರನಳೆದಿಹೆನು
ಮೇರೆದಾಂಟಿಹುದು ಮಹದಂತರಿಕ್ಷ
ಕಷ್ಟಕಾತರ್ಯದಲಿ ಸುರಿದಶ್ರುಸಂಪಾತ
ಪುಷ್ಕರದ ಮುಂದೆ ವಾರಾಶಿ ರೂಕ್ಷ!

ಆವರಿನ್ನನಿವಾರ್ಯ ಕಾಮನೆಯ ದುರ್ದಮ್ಯ
ದಿಶೆಯನರಿತತ್ತಕಡೆಕೊಳುವ ಹೆಜ್ಜೆ
ವಿಷಯವಾಸನೆಯ ಸೆಳೆಸೆಳೆತದುತ್ಪಾತ ಮು
ಚ್ಚಳ ಮೀರಿ ಯುಚ್ಚಳಿಸಲವಳೆ ಬೊಜ್ಜೆ

ಇವಳ ಮನಸೆಂತಿಹುದು? ಕೆಲವೊಮ್ಮೆ ಪತಿಕರಿಸಿ
ಸತಿಯ ಭವಬಾಂಧವ್ಯ ಬೆಳೆವುದುಂಟು
ಬರಿದೆ ಚೆಲುತನಕೆ ಕೈಜಗುಳುವಾಸೆಯ ತುತ್ತೆ?
ಪತಿ ವೇಷದಲಿ ತಿಳಿವೆನಿದರ ಗುಟ್ಟು

(ಬಿಳಿ ಗಡ್ಡವಿಟ್ಟುಕೊಂಡು ಬ್ರಹ್ಮೋತ್ತರೀಯ ಹೊದೆದು ಬೃಹಸ್ಪತಿಯಂತೆ ಮುಂದೆ ಬಂದು)

ಚಂದ್ರ—(ಉಪಹಾಸವಾಗಿ)

ಏನಿದಾಹಾ! ವಿಪರ್ಯಾಸ ಬಾಳ್ಬಳ್ಳಿ ಕೊನೆ
ಯಳ್ಕರೆಯನೋಲೈಸಿ ಜಗುಳಿ ಬಿತ್ತೆ?

ಬಾ ಬಾರೆ ಮನದನ್ನೆ! ನಿನ್ನ ನಿಜ ದಾಂಪತ್ಯ
ವೊದಗಿಬಂದಿದೆ ನೋಡು ಮಾಪತಿವ್ರತೆ!

(ತಾರೆಯನ್ನು ಸಖಿಯರ ಕೈಯಿಂದ ಕೊಂಡು ಗಾಳಿಬೀಸುವನು)

ಸಖಿಯರು—(ಮುಂದೆ ಬಂದು ಮುಖಮುಖ ನೋಡಿಕೊಂಡು ವಿಹ್ವಲ ಚಿತ್ತರಾಗಿ)

ಶಿವಪೂಜೆಯಲಿ ಕರಡಿ ಬಂದಂತೆ ಯೀ ಮುದುಕ
ನುದಯವೇಕಾಯ್ತಿಲ್ಲಿ? ಇಂತ ಹೊತ್ತು!
ಭವದ ಕೊನೆಯಾಟದಲಿ ಚಣಚಣವು ಕೈ ಮೀರಿ
ಯವಸಾನಕೊವಗುತಿದೆ—ಮಹಾಪತ್ತು!

(ತಾರೆ ಸ್ವಲ್ಪ ತಿಳಿವುಗೊಂಡು ತನ್ನಷ್ಟಕ್ಕೇ ಗುಣುಗುಟ್ಟುವಳು)

ತಾರೆ—

ಯಾರೋ ಬಂದರು ದೂರದೆ ನಿಂದರು
ಏಕೋ ನನ್ನನೆ ನೋಡಿದರು
ಕಾರುಣ್ಯದ ಕಿರುದನಿಯಲಿ ಕರೆದರು
ಏನೋ ಪಿಸು ಮಾತಾಡಿದರು

ತಂಗಾಳಿಯು ತಲೆದೂಗಿತು ಬಾನ್‌ಬಯ
ಲೆಲ್ಲವು ಕುಸುಕುಸು ನಗುತಿತ್ತು
ಸಿಂಗಾರದ ಸಿರಿಚೆಲ್ಲಿದ ಗಮಗಮ
ಹೂವಿನ ಪರಿಮಳ ಮಿಗುತಿತ್ತು

ಆಸೆಯ ತಂಬೂರಿಯ ದನಿ ಮಿಾಂಟುತ
ಹಾಡುವ ತುಂಬಿಯು ಸುಳಿದಿತ್ತು
ಸೂಸುವ ಸಂತೋಷದ ಹೂಬಟ್ಟಲ
ಮನಸಿನ ಮುಚ್ಚಳ ತೆರೆದಿತ್ತು

ಹಚ್ಚನೆ ಹಸುರಿನ ಹೊಲವೆಲ್ಲಾ ಮೈ
ಮುಚ್ಚಿದ ಗರುಕೆಯ ಹೊದ್ದಿತ್ತು

ಬೆಚ್ಚನೆ ಬಿಸಿಲಿನ ಕೈಬೆರಳಾಟದ
ಮೆಚ್ಚಿತದಲಿ ಮೈನವಿರೆದ್ದಿತ್ತು
ಮುಸುಕಿನ ಮನೆಯಲಿ ಮಲಗಿದ ಹಕ್ಕಿಯು
ಹಾರಿತು ಮುಂದಕೆ ಗರಿಗೆದರಿ
ಹೊಸ ಹೊಸ ನೋಟದ ಹೊಸಹುಚ್ಚಾಟದ
ಹೊಸ ಹುಮ್ಮನಸಿನ ಹೆದ್ದಾರಿ
ಯಾರೋ ಬಂದರು ಬಳಿಯಲಿ ನಿಂದರು
ತಂದರು ಹೂವಿನ ಹೊರೆ ಹೊರೆಯ
ಮಲ್ಲಿಗೆಯರಳನು ಸುಳಿಮುಂಗುರುಳಿನ
ಮೇಲಿಟ್ಟರು—ನಡುಗಿತು ಹೃದಯ!

(ಮೆಲ್ಲನೆ ಚಂದ್ರನ ಗಡ್ಡಕ್ಕೆ ಕೈಹಾಕಿ ಬೆಚ್ಚಿಬಿದ್ದು ಹಿಂದೆ ಸರಿದು)
ಯಾರಿವರು ಬಂದವರು? ಏಕೆ ನಿಂದಿಹರಿಲ್ಲಿ
ಏನು ಸತಿಯೊಡನೆ ಮತಿಗೊಳುವುಪಾಯ?

(ನೆನಪುಗೊಂಡು)

ಓಹೊ ತಿಳಿವಾಯ್ತು. ನೀವಲ್ಲಾಗ ಬಂದವರು
ನೀವೆನ್ನ ತಾತ—ಮುತ್ತಾತ ಜೀಯ!
ಜೀಯ! ಗುರುತರ ಪಾಪವೆನ್ನುವಿರೆ? ಪಾಪದು
ತ್ಥಾನ ತೊಡಗಿಹುದಲ್ಲಿ ಬಾಲ್ಯದಲ್ಲಿ
ಕಾಯಲೆಂದೊದಗಿ ಹೂವನುಕೊಯ್ದುಕೊಳುವನ್ನ
ತುಂಬಿ ಸುಳಿದಿತ್ತು ಹೃನ್ಮಧ್ಯದಲ್ಲಿ!

ಇದನೆಂಜಲೆಂದು ತಿಳಿತಿಳಿದು ತಳೆದಿಹಿರಿ. ವಿಧಿ
ಸಂಕಲ್ಪವನ್ಯತ್ರ ಬಿಗಿದ ಪುಷ್ಪ
ಈ ಮನಸುಮಾತು ಈ ದೇಹನಿಮದಲ್ಲ—ನಿ
ಮ್ಮಾಸರಕೆ ಸೇರಿಹುದು ಸುರಿವ ಬಾಷ್ಪ!

ನಿಮ್ಮ ಕಾಣಲುಬಹುದು ನಿಮ್ಮ ಕೇಳಲು ಬಹುದು
ನಿಮ್ಮೊಡನೆ ಕೂಡಲಹುದೆಂತು ತಾತ?
ನೀವೆಮ್ಮ ಮನೆ ಮನೆಗೆ ಬಂದಾಗ ಬಿಗಿದಪ್ಪಿ
ಮಗಳೆಂದು ತಕ್ಕೈಸಿದವರು ಸತ್ಯ!
ನಿಮ್ಮಡಿಗೆ ಶರಣು ನಿಮ್ಮಾದರಕೆ ಶರಣು ನಿ
ಮ್ಮನ್ನ ನೀರಿನ ಋಣಕೆ ಶರಣೊ ಶರಣು!
ನನ್ನ ದಾರಿಯು ಬೇರೆ—ಮೃತ್ಯುಲೋಕದ ಮಿಲನ
ಕಾಲಬಂದೊದಗಿಹುದು. ಕಾಯೆನಿನ್ನು!

(ಮುಂದೆನೋಡಿ ಕೈ ನೀಡಿ)

ವಿಕಾರ ಮನದಲಿ ಚಕೋರಿ ಕರೆವಳು
ಚಂದ್ರ ಬಾರೊ ಚೆಲುರಾಜ
ವಿನಾಶಯುಷ್ಟಿಯು ಪುನಃಸಮುಷ್ಟಿಗೆ
ಕಾದಿಹಳೋ ರಸರಾಜ!

(ಎಂದು ಮತ್ತೊಮ್ಮೆ ಮೂರ್ಛಿತಳಾಗುವಳು)

ಸಖಿಯರು—(ದುಃಖದಿಂದ ಕಣ್ಮುಚ್ಚಿಕೊಂಡು)
ಕೊನೆಯಾಯ್ತು ಸಿಂಗಾರ! ಕೊನೆಯಾಯ್ತು ಬಾಳ್ ಬಿಗಿದ
ತಂತಿಗಳ ಗುಂಫನದ ಚಿರಪ್ರೇಮ

ಚಂದ್ರ—(ಛದ್ಮವೇಷವನ್ನು ದೂರಕ್ಕೊಗೆದು)
ಸಾಕು ನನ್ನೀವೇಷ ವಿರಹದಾವರ್ತದಲಿ
ಸುಳಿಯೊಂದು ಸೋಂಕಿದರೆ ಅದೇ ವಿಷಮು!

(ತಾರೆಯನ್ನು ತಬ್ಬಿಕೊಂಡು ಮೃದುವಾಗಿ)

ನೋಡು ನೋಡಕ್ಕರೆಯಭಾವದಲಿ ಬಂದಿಹೆನು
ಬಂದಿಹೆನು ಶ್ರಾವಣದ ಸಂಗೀತವಾಗಿ
ತೀಡುವಾನಂದ ನೈರ್ಮಲ್ಯದಲಿ ನಿಂದಿಹೆನು
ನಿಂದಿಹೆನು ಮಂಗಳದ ಸಾಹಿತ್ಯವಾಗಿ!

ಸಖಿಯರು—(ಹಿಂದೆ ನೋಡಿ ಆಶ್ಚರ್ಯದಿಂದ)

ಏಂ ವಿಚಿತ್ರ ಮಧುರಪತ್ರ
ಬರೆದ ಕಾಮಚಿತ್ರ!
ಏಂ ವಿಚಿತ್ರ ರಸದ ಸೂತ್ರ
ಸುರಿದ ಸೋಮಪಾತ್ರ!

(ತಾರೆಯು ಮತ್ತೂ ದಿಗ್ಭ್ರಮೆಯಿಂದ ಸುಮ್ಮನಿರುವಳು)

ಚಂದ್ರ—(ಅನುನಯವಾಗಿ ತಕ್ಕೈಸಿ)

ನೀಸಿಂತು ಮುನಿದು ಮಾತಾಡದಿರೆ ನಲ್ಲೆ! ಮ
ತ್ತಾರಿಗೋಸುಗ ಜಗದೆ ಬಾಳುತಿರಲಿ?
ನಿನ್ನ ಮೊಗನೈದಿಲೆಯು ನಗೆಜೇನ ಸೂಸದಿರ
ಲಾರಿಗೋಸುಗ ಎದೆಯನಾಳುತಿರಲಿ?

ತಾರೆ—(ಕಣ್ಣುಜ್ಜಿಕೊಳ್ಳುತ್ತ)

ಸ್ವಪ್ನವಿದೇನುನ್ನಿದ್ರೆಯ ಕಲ್ಪನೆಯೆ
ಹೃತ್ತಾರದ ಕಾರುಣ್ಯ ನಿವೇದನೆಯೆ?
ಮತ್ಪ್ರೀತಿ ಪ್ರತಿಬಿಂಬದ ಪಾರಣೆಯೆ
ಚಿತ್ತಾಂಚಿತ ಕಾಮಾಧಿಯ ಮಾರ್ಗಣೆಯೆ?

ಚಂದ್ರ—(ಸಮಾಧಾನವಾಗಿ ತಲೆನೇವರಿಸಿ)

ಇದು ನೆನಸು—ಕನಸಲ್ಲ
ಇದು ಮಾಯೆಯಲ್ಲ ಮೈತ್ರಿ
ಇದು ಮಾತು—ಮೃತಿಯಲ್ಲ
ಇದು ಮುಗ್ಧ ಮಿಲನ ರಾತ್ರಿ!

ನಾಲ್ಕು ದೆಸೆ ಕಾದಿಹುದು
ಈ ಮಧುರ ಮಿಲನಕಾಗಿ

ಹೂ ಹಣ್ಣು ಹಂಪಲಿನ
ಜಗವೆಲ್ಲ ಬಾಗಿಬಾಗಿ!

(ತಾರೆ ಮತ್ತೂ ಸುಮ್ಮನಿರುವುದನ್ನು ಕಂಡು ಸಖಿಯರು ಬಳಿಬಂದು ಉದ್ವೇಗದಿಂದ)

ಚಾರುಮತಿ—

ಇದೇನು ಸಂಭ್ರಮ--ಇದೇ ಮನೋರಮ
ಜೀವನದನುಬಂಧ
ಸಮಿಾಹಪುಷ್ಪದ ಸಹಾಸಸಮ್ಮತಿ
ಸುರಿದಿಹ ಮಕರಂದ

ಚಂದ್ರಮುಖಿ—

ನವೀನ ರಾಜ್ಯದ ನಿಯೋಗ ಭಾರಕೆ
ತೂಗಿದೆ ತರುಗುಲ್ಮ
ರಸಾಧಿದೇವಿಯ ಕೃಪಾನುಭಾವಕೆ
ಜಿನುಗಿದೆ ಜನಜನ್ಮ!

ತಾರೆ - (ಉದಾಸಳಾಗಿ ಚಿಂತೆಯಿಂದ)

ನಲ್ಲ! ನಿನ್ನೊಡನಾಟಕಾಗಿ ಕಾದಿಹ ಹೊತ್ತು
ಸಲ್ಲದೆಂದಾಡದೇ ಮೂರು ಲೋಕ?
ಚೆಲ್ಲಿದಮೃತದ ಬಿಂದು ಚೆಲುವಾದರೇನು—ಮ
ತ್ತುಣುವ ಬಾಯೆಂಜಲೆಂಬುದೆ ವಿವೇಕ!

ಈ ಮಹಾಸತಿಯರೊಕ್ಕೂಟದಲಿ ನನ್ನ ಮು
ತ್ತೈದೆತನ ಮಸಿಯಾಗಿ ಮಾಸದಿಹುದೆ?
ಕಾಮನೆಗೆ ಕೈಸೋತ ಕನ್ನೆಯೆಂದಾಡಿದರೆ
ನನ್ನ ಮಂಗಲಸೂತ್ರ ಮೆರೆಯಬಹುದೆ?

ಒಂದು ಕಡೆಯುಪವಾದವೊಂದು ಕಡೆಯುಪಯಶ
ಸ್ಸೊಂದು ಕಡೆ ಗುರುಶಾಪದಾಟೋಪವು
ಒಂದುಕಡೆ ನೋವು ಮತ್ತೊಂದುಗಡೆ ಹೆಬ್ಬಾವು
ಮುಂದುಗಡೆ ಕಾದಿಹುದು ನನ್ನ ಸಾವು!

ಸಖಿಯರು--(ದುಃಖದಿಂದ ಚಂದ್ರನಿಗೆ ಕೈಮುಗಿದು ದೈನ್ಯವಾಗಿ)
ಕ್ಷಮಿಸೆಮ್ಮ ಗೆಳತಿಯನು ವಿರಹದುಃಖದ ಕಾವಿ
ನೆರಕದಲಿ ಮತಿಗೆಟ್ಟು ನುಡಿವ ಮಾತು
ತೆರಳದಿರು ನಮ್ಮಾಣೆ! ನಿನ್ನುಸಿರ ತಂಪಿನಲಿ
ಹಸನಾಗಲುಂಟು ಹೆಂಗರುಳು ಹೂತು!

ಚಂದ್ರ—(ನಗುತ್ತಾ ತಾರೆಯ ಕೈಹಿಡಿದು)
ಬಾ ನಿನ್ನ ಬದುಕು ಬಂಗಾರವಾಗುವ ಕಾಲ
ಬಂದಿಹುದು ಈ ಮಹತ್ಸಂಗದಿಂದ
ಗಿರಿದರಿಯನುಳಿವ ನಿರ್ಝರಿಯುಕಾಳ್ಕಮರಿಯಲಿ
ನುಸುಳಿ ಸಾಗರದತ್ತ ಸಲುವ ಚೆಂದ!

ನೆನವರಿಸು ಹಿಂದೊಮ್ಮೆ ಗುರುಬೃಹಸ್ಪತಿಯು ತ
ನ್ನನುಜ ಪತ್ನಿಗೆ ಗೈದ ಹೊಲೆಹಾದರ
ಮರುಗಳಿಸುತಿಹುದು ಸಂವರ್ತನಭಿಶಾಪದಲಿ
ಅದು ದಾಂಟಲಾರದ ಮಹಾಸಾಗರ!

ಕರ್ಮದಾವರ್ತದಲಿ ಕಾರಣವು ವಿಧಿನಿಯಮ
ದಂತೆ ಬರುತಿದೆ ಹೇತು ನಮ್ಮದಲ್ಲ
ಸುಮ್ಮ ಸುಮ್ಮನೆ ನಾವು ನಾವೆಂಬಹಂಕಾರ
ಕ್ಷುಲ್ಲಕವು ನಮ್ಮ ಸಾಧನೆಯು ವಿಫಲ!

ನೋಡದೋ ಬಾನು ಬಾಯ್ದೆರೆದಿಹುದು! ನನ್ನ ಪರಿ
ಕಕ್ಷೆಯಲಿ ಬರಲಿರುವ ತಾರೆ ನೀನು

ಈ ಸಮಾಕರ್ಷಣೆಯು ಘರ್ಷಣೆಯು ಸ್ಫುರಣೆಯಲಿ
ಹೊಸಲೋಕ ಹುಟ್ಟಲಿದೆ ದಿವ್ಯಭಾನು!
ಇದು ನಡೆದೆ ತೀರಲಿಹ ಸಂಕಲ್ಪ ವೈಕಲ್ಪ
ವಾಸನೆಯು ಗುರುತಲ್ಪ ಗಮನವಲ್ಲ
ಇದೆ ನಿನ್ನ ಜೀವಿತಕೆ ನಿಯತಿ ನೆಮ್ಮದ ಸೂತ್ರ
ಕೇಳು ಪುಣ್ಯಾಖ್ಯಾನದೊಂದು ಸೊಲ್ಲ!

(ತೆರೆಯಲ್ಲಿ)

'ಅಹಲ್ಯಾದ್ರೌಪದೀಸೀತಾತಾರಾಮಂಡೋದರೀ ತಥಾ
ಪಂಚಕನ್ಯಾಃ ಸ್ಮರೇನ್ನಿತ್ಯಂ ಮಹಾಪಾತಕನಾಶನಂ'

ತಾರೆ--(ಚಿಂತೆಗಳೆದು ಎದ್ದು ನಿಂತು ಚಂದ್ರನ ಕೈಹಿಡಿದು ಅನುನಯದಿಂದ)

ಏಂ ವಿಧಿಯಾಟದ ನವನಾಟಕಕೆ
ನನ್ನೀ ಸೌಂದರ್ಯವು ಸಾಕೆ?
ನಿನ್ನಮೃತತ್ವದ ಸಿರಿಸಂಪದಕೆ
ಈ ಕೈದೀಪದ ಕಿರುಬೆಳಕೆ!

ಚಂದ್ರ—

ಈ ಸುಖದ ಸಂಪರ್ಕ ಕ್ಷಣಿಕ ಚಿತ್ರಣವಲ್ಲ
ಯುಗಯುಗವುಪೂಜಿಸುವ ಪುಣ್ಯಯೋಗ
ಈ ಶ್ರಾವಣಾಷ್ಟಮಿಯ ನಟ್ಟಿರುಳ ನೇಮದಲಿ
ನೀಡಲಿಹ ದುಗ್ಧಾರ್ಘ್ಯ ನಿನಗೋಸುಗ!

(ತೆರೆಯಲ್ಲಿ)

'ಶಶಿನೇ ಚಂದ್ರದೇವಾಯ ಸೋಮದೇವಾಯ ಚೇಂದವೇ
ಶೀತದೀಧಿತಿ ಬಿಂಬಾಯ ತಾರಾನಾಥಾಯ ತೇ ನಮಃ'

ತಾರೆ—(ಸಂತೋಷದಿಂದ ಚಂದ್ರನ ತೋಳಿಗೆ ತಕ್ಕೆ ಬಿದ್ದು)

ಈಸು ದಿನ ನಿನಗಾಗಿ ಕಾದ ಮಮಸಂಕಲ್ಪ
ದಾದರ್ಶಬಿಂಬ ಕೈಗೊದಗಿರುವುದು

ಈಸು ದಿನ ಚೆಲ್ಲಿರುವ ತಂಬಾಲು ನನ್ನ ತುಟಿ
ಸಂಪುಟಕೆ ಸುರಿದು ಸಿಗ್ಗಾಗಿರುವುದು

ಈ ಸುದಿನ ಮನದನ್ನ! ನಿನ್ನಮೃತಕಿರಣದಲಿ
ನನ್ನ ಜಡ ಜೀವನವು ಸಚ್ಚೇತನ
ಈ ಸುದಿನ ಮಧುರ ಹೃಲ್ಲಹರಿಗಳ ಸಮ್ಮಿಲನ
ಇದೊ ನನ್ನ ಹೆಣ್ತನವು ನಿನ್ನಧೀನ!
(ಎಂದು ವಂದಿಸುವಳು)

ಚಾರುಮತಿ—(ಸಂತೋಷದಿಂದ)
ಆಹಾ ತೋಳಿನ ತೂಗುಯ್ಯಾಲೆಯಲಿ
ತಂಗಿದೆ ಚಕ್ಕದ ಜೋಡು
ಮನದಿಸಿವೆಂಡಿರ ಮಮತೆಯ ಕಂಡಿರ
ಆಹಾ ಹೊಮ್ಮಿದೆ ಹಾಡು!

ಮಾಪೂರದ ಸೀರಾಟಕೆ ನೆಚ್ಚಿದೆ
ಮಧುರಂಗನ ಮದ್ದಾನೆ
ಆ ಪಾರದ ಬೆತೆ ಬೇಗುದಿ ಕೊಚ್ಚಿದೆ
ಹೆಚ್ಚಿದೆ ಬಾಳಿನ ಸಹನೆ

ಚಂದ್ರಮುಖಿ— ನಗುತಿದೆ ಹೂ! ಹೂಗಂಗಳ ಕಾಮನೆ
ಯರಳಿದೆ ಕರೆವಳು ರಾಣಿ!
ರಸಗಂಗೆಯ ನಡುಹರಯದ ದೋಣಿಯ
ಹೊಸ ಬಯಕೆಯು ಚುಕ್ಕಾಣಿ!

ಆಹಾ ನೂಪುರವಲುಗಿದೆ! ಗುಣುಗುಣು
ಗಾನವೆ ಕಲ್ಪದ ಕವಿತೆ
ಆಹಾಸೊಗಸಿನ ಸಿರಿಮುಡಿ ಕಂಡಿದೆ
ಬರೆದಿದೆ ವಿಶ್ವದ ಚರಿತೆ!

ಚಾರುಮತಿ— ಹಿಡಿತಗೊಂಡ ಗಾಳಿಪಟ
ಬಿದ್ದಿರುವುದು ನೋಡೆಸಖಿ!
ಇದೇ ಬಾಳ ಕುಣಿದಾಟ
ಏನು ಸೊಗಸು ಚಂದ್ರಮುಖಿ!

ಚಂದ್ರಮುಖಿ—

ಬಯಕೆ ಬಿಗಿತದೀ ಕುದುರೆ
ಕುಂಟಿರುವುದು ನೋಡೆ ಸಖಿ!
ಅದನೇರುವ ಕಲಿರಾವುತ
ಬಂದಿರುವನು ಚಾರುಮತಿ!

(ಇಬ್ಬರೂ ಚಪ್ಪಾಳೆ ಹೊಡೆದು ನಗುವರು. ಒಂದಿಗೆ ಚಂದ್ರ ತಾರೆಯರೂ ನಗುವರು)

೨೪—೮—೧೯೫೭

ಮಂಗಲಗೌರಿ

ಪಾತ್ರವರ್ಗ

ಮಾಲಿನಿ
ಶಾಲಿನಿ
ಪಾರ್ವತಿ
ಈಶ್ವರ

(ದೃಶ್ಯ—ಹಿಮವತ್ಪರ್ವತದ ತಪ್ಪಲು ಪ್ರದೇಶದ ತಪೋವನ, ಪರ್ಣಶಾಲೆಯ ಅಗ್ರಭಾಗದಲ್ಲಿ ಪಾರ್ವತೀ ಸಖಿಯರು ಪೂಜಾ ಸಾಮಗ್ರಿಗಳನ್ನು ಸಜ್ಜುಗೊಳಿಸುತ್ತಿರುವರು)

ಮಾಲಿನಿ---(ಚಳಿಗೆ ನಡುಗುವ ಮೈಯನ್ನು ಸೆರಗಿನಿಂದ ಮುಚ್ಚಿಕೊಳ್ಳುತ್ತ)

ಹಿಮಗಿರಿಯಿನ್ನೈತಂದ ಶೀತಲ
ಶಿಶಿರನಿಗೆ ಸುಸ್ವಾಗತ
ಅಮಮ ಕೊರೆಯುವ ಕುಳಿರ ಕೂರಸಿ
ಹಿಡಿದ ಕುದುರೆಯ ರಾವುತ!

ಸಖ ಸಮೀರನ ಬೆರಳ ತುದಿಯಿಂ
ಕರುಳ ತಂತಿಯ ಮೀಂಟುತ
ನಖಶಿಖಾಂತದ ಬಿಸಿಯ ರಕುತದ
ಬೋಗುಣಿಯ ಬಾಯಿಮಾಂಟುತ

ಮಂಜು ಮಬ್ಬಿನ ಮುಸಕು ಮಾಯೆಯ
ಮುಸುಕು ಬಲೆಯನು ಬೀಸುತ
ಪಂಜುನೇಸರ ಬಿಸಿಲ ತಣ್ಣನೆ
ತಣಿಸಿ ತಂಬಾಲೈಸುತ

ಶಾಲಿನಿ— ಮೊದಲು ಕೂಗುವ ಕೋಳಿಗಳ ಕಿರು
ವಕ್ಕಿಗಳ ಬಾಯ್ಬಿಗಿಯುತ
ತೊದಲುಮಾತಿಲಿ ನಡನಡುಗಿ ತ
ತ್ತರಿಪ ತುಟಿಗಳ ಬೆಸೆಯುತ

ಸುರಗಿ ಕೆನ್ನೆಯ ಚಿವುಟಿ ಚೆಲುವಿನ
ತುರುಗು ಹೂಗಳ ಹೇರುತ
ತರುಲತೆಯ ತಾರುಣ್ಯಕೊದಗದ
ಬಂಜೆ ಬದುಕನು ಹೀರುತ

ನೆರೆದು ಬಂದಿದೆ ತಾಯ್ತನದ ತೋ
ಳ್ನೆಗಹಿ ನಚ್ಚಿನ ಫಾಲ್ಗುನ
ಪರೆಗಳೆಯೆ ನಡುಹುತ್ತ ಸೇರಿದ
ಹಾವಿನಂತಿದೆ ಜೀವನ!

ಮಾಲಿನಿ— ಎಂದು ಬರುವನೇನೊ ಮಧುರ ಮಿಲನಕಾಗಿ
ಕಾದ ಕಲಿಕೆಯತ್ತ ನಮ್ಮ ಭೂಪನು
ಸಂದುದೇನು ವರುಷವೊಂದು ಬಿಸಿಲುಗಾಳಿ
ಯೆಂದು ಬೆಂದುನೊಂದು ಬಳಲಿತೀತನು!

ಶಾಲಿನಿ— ವಸಂತಮಾಸ ಬಂದು ಹೋಯ್ತು
ಮಲರತುಟಿಯು ತೆರೆದುಹೋಯ್ತು
ಮಧುರಗಾನ ಹರಿದುಹೋಯ್ತು
ಸಗ್ಗ ಸರಿದು ಹೋಯ್ತು!

ಸಮಂತು ಸುಖದ ಜೇನು ಸೂಸಿ
ನವಪರಾಗ ಸೆರಗುಹಾಸಿ
ತಂಪುಗಾಳಿ ಪಂಕ ಬೀಸಿ
ಸುಗ್ಗಿ ಸಂದು ಹೋಯ್ತು!

ತುಂಬಿಬಂದು ಹಾಡಲಿಲ್ಲ
ತುಟಿಗೆ ತುಟಿಯು ಕೂಡಲಿಲ್ಲ
ತುಂಬು ಹರಯ ಹರಿವಾಣದ
ಹೂವ ಮುಡಿಯಲಿಲ್ಲ
      ಅಂಬುಜಾಕ್ಷಿಯಮೃತಾಧರ
      ಬಿಂಬ ಮೌನಗೊಂಡ ಮುದ್ರೆ
      ಓಂ ಶಿವೇತಿ ಓಂ ಶಿವೇತಿ
      ನಿತ್ಯ ನವೆದ ಕಾಲ!

ಮಾಲಿನಿ--

ಕಾಡಸುಟ್ಟು ನಾಡಸುಟ್ಟು
ಬಯಲ ಸುಟ್ಟು ಬಾನ ಸುಟ್ಟು
ಬದುಕು ಸುಟ್ಟು ಎಲ್ಲ ಸುಟ್ಟು
ಹೊಸೆದ ಬೆಂಕಿ ಹಾಸುಗೆ
      ಹೊಗೆಯು ಕಾರಿ ಕಾವು ಕಾರಿ
      ಭುಗಿಲ ಕಾರಿ ಕಿಡಿಯು ಕಾರಿ
      ಕೆಂಡಕೆಂಡಗಳನು ಕಾರಿ
      ಕಳೆದು ಹೋಯ್ತು ಬೇಸಗೆ!

ಬಿಸಿಲ ತಾಪ ಸುತ್ತಮುತ್ತ
ಸುಡುವ ಬೆಂಕಿ ನಡುಹೊತ್ತಿನ
ನೇಸರತ್ತ ನಟ್ಟಡಿಟ್ಟ
ಗೊಂಡ ತಪದ ಬೇವಸ
      ನಳಿನನೇತ್ರೆ ದಿವಸವೆಲ್ಲ
      ಹೂವಿನಂತ ಹಗುರ ಮೈಯ
      ಹರಡಿ ಬಾಡಿ ಕಾದು ಕರಟಿ
      ಬೆಂದುದೇನು ಸಾಹಸ!

ಶಾಲಿನಿ— ಬಿರುಗಾಳಿ ಬೀಸಿತ್ತು ಸೋರುಮಳೆ ಸೂಸಿತ್ತು
ಥರಥರನೆ ನಡುಗಿತ್ತು ನಾಡುಕಾಡೆಲ್ಲ
ಮಿಂಚು ಮಿಂಚಿನಕಣ್ಣು ಹೊಂಚುಹೊಗರಿನ ಸಂಚು
ಚಂಚುತೂರಿತ್ತು ಬಾಂದಳದೆ ಕಾರ್ಗಾಲ

ಸುರಿಮಳೆಯ ಸಂದೇಶ ಗುಡುಗುಡುಗಿನಾದೇಶ
ಬರಸಿಡಿಲ ಕೈಬೆರಳ ತರ್ಜನೆಯ ಭಾವ
ಕಮಲಮುಖಿಯನುಸಾರಗೊಳದ ಕರ್ಮಾಧೀನ
ನಡೆದುದೊಂದೇ ತಪಸು ಹರಮಹಾದೇವ!

ಮಾಲಿನಿ— ಬಂದಿತು ಮರಾಲ ಮಹಿಮಾದರ್ಶದೊಳ್ಗಿರಿಯ
ತೆರೆಯ ಮೇಲಿಂದಿಳಿದ ಸುಖಶರತ್ಕಾಲ
ಸೌಂದರ್ಯದುದಯ ಕಡೆಕಡೆದ ತಿಂಗಳಹಾಲ
ಸಿಂಗಾರಸುರಿದ ಸಾಂದ್ರತೆ ವಿಯದ್ಧವಳ!

ಭಕ್ತಿಯಲಿ ಮಿಂದು ಗಿರಿಝರಿಯ ನಿರ್ಮಲ ಜಲಾ
ಪಾತದಲಿ ನಸುಕು ನಗೆಯಾಡುತಿಹ ಮುನ್ನ
ಈ ತರುಣಿಯರ್ಪಣೆಯ ದಿವ್ಯ ದೀಪಾರ್ಚನೆಯ
ಕಾಂತಿಯಲಿ ಮುಂಬೆಳಕು ತೀವಿದನುಮಾನ

ಶಾಲಿನಿ— ಕಾಲಚಕ್ರವು ನಿಂತು ನಿಂತು ಹೊರಳಿಹುದತ್ತ
ದಿನರಾತ್ರಿ ಮಗುಚಿರುವ ತಾಳಪತ್ರ
ಹೊಚ್ಚ ಹೊಸತಿನ್ನು ಕೈಗೆಟಕದಿದೆ. ಹಳಹಳತು
ಕೊಚ್ಚಿಹೋಗಿದೆ. ಬರಿದು ಭಿಕ್ಷಾಪಾತ್ರ!

ಆದರೇನಮೃತತತ್ವಕಾಗಿ ನಿಶ್ಚಲತೆಯಲಿ
ಚಾದಗೆಯು ನಿರ್ನೆರಂ ಕಾದಿರುವುದು
ಆದಳದ ತಾಯ್ತಂದೆ ಪರಿವಾರ ರಾಜಭೋ
ಗಾತಿಥ್ಯವೆಲ್ಲ ಬೇಡಾಗಿರುವುದು

ಮಾಲಿನಿ — ಅಂದೇನೊ ಹಿಮರಾಜನಾಣತಿಗೆ ತಲೆಬಾಗಿ
ಶಿವನ ತಪದಲಿ ನೆರವುಗೊಂಡಳಾಕೆ
ಚಂದಿರನ ಬಿಂಬದಲಿ ಸಲುವಕಳೆಯಂತೆ ಬಗೆ
ಸಂದಿತಿವಳೆದೆಯ ಮಧುರತೆಯ ಮೊಳಕೆ

ಏನೊ ಚಿದ್ರತಿಯ ಮುಖವದುರಿದಂತಾ ಮಹಾ
ಮಹಿಮನಾನಂದವೀಕಡೆ ಕಂಡಿತು
ತಾನೆ ನೋಡಿದಕತಕೆ ಕಾಮನಟ್ಟಿದ ಸರಳ
ಗುರಿಗಾಗಿ ಸುಯ್ಯೆಂದು ಸಿಡಿದೆದ್ದಿತು!

ಕನಲುಗೆಂಡದ ಮುಂದೆ ಕಾಮನಾಹುತಿಯಾಯ್ತು
ಸುರರೆಣಿಕೆ ಕೈಮೀರಿ ಕರಟಿಹೋಯ್ತು
ತನಗೇನು ಗತಿಯೆಂದು ಗೌರಿಸುಯ್ತಿಡುವನ್ನ
ಶಂಕರನ ಘನರೂಪ ಮಾಯವಾಯ್ತು!

ಒಮ್ಮೆ ಕೂಡಿದ ಹರಣ ಹಿಂದೆಗೆಯದಿಹ ಸತ್ಯ
ಸಂಕಲ್ಪದಲಿ ಬಂದಳಿತ್ತ ಗೌರಿ
ಒಮ್ಮೆ ಹೂಡಿದ ಬಾಣ ಹಿಮ್ಮೆಟ್ಟದಿಹ ಮಹಾ
ಸತ್ವದರಿಕೆಯ ಶೀಲದರಸುಗುವರಿ!

ಆ ಸುಖದ ಸಜ್ಜೆ ಸಿಂಗಾರ ಕುಣಿತದ ಗೆಜ್ಜೆ
ತಾಯ ಲಾಲನೆಯ ಸಂತೋಷದೂಟ
ಆ ಸಮಯ ಸಮಯ ಭೋಗದ ಕೋಮಲಾಂಗವದು
ತಾನೆ ತಪಕಾಗಿ ನವೆದಿರುವುದಕಟ!

ನಿತ್ಯಪೂಜಾ ಪುರಸ್ಕಾರ ಜಪತಪ ಹೋಮ
ದರ್ಚನೆಯು ಸ್ನಾನಸಂಧ್ಯಾವಂದನೆ
ತಚ್ಚಿಂತೆ ಜಾಗರ ಸ್ತುತಿಗಾನವನುದಿನಂ
ನಾಟ್ಯನವರಸ ಭಾವದಭಿನಂದನೆ

ಶಾಲಿನಿ—

ಬೆಳಕು ಕಂಡಾ ಮೇಲೆ ಕತ್ತಲಾಸರವಲ್ಲ
ಮೊಳಿತು ಕಡೆಗಾಗಿ ಮುನ್ನಡೆದ ಜೀವ
ಮಳೆಯೇನು ಬಿಸಿಲೇನು ಕರುಳೆಲ್ಲ ಕೊರೆಕೊರೆವ
ಚಳಿಯೇನು ಸಹನೆಯು ಸಮಾನಭಾವ

ಮಾಡಲೇನುಂಟು? ಗೆಳೆತನದ ಬಾಂಧವ್ಯದಲಿ
ಬೆಂಬಿಡದೆ ಮಿಡಿಯುತಿಹುದೆಮ್ಮ ಕರುಳು
ನೀಡು ಮಲ್ಲಿಗೆ ಬಳ್ಳಿ ಮಾಮರವನೇರಿದರೆ
ನೋಡುವೆಮಗಾನಂದದೊಂದು ಪಾಲು !

ಮಾಲಿನಿ—

ಅತ್ತ ಮಿಾಯಲಿಕೆಂದು ಹೋದವಳು ಬರುವ ಸರಿ
ಹೊತ್ತಾಯ್ತು ಕೇಳುತಿದೆ ದಿವ್ಯಗಾನ
ಸುತ್ತ ಸುರಿದಿರುವ ಹಿಮರಾಶಿಯಲಿ ಮೆಲ್ಮೆಲನೆ
ಚಿತ್ರೈಸುತಿರುವೊಂದು ಹಂಸಗಮನ !

(ಸಖಿಯರು ಹೂವನ್ನು ಹರಿವಾಣದಲ್ಲಿಟ್ಟು ಹೋಮಕುಂಡದಲ್ಲಿ ಬೆಂಕಿಯುರಿಸಿ ದೀಪಹೊತ್ತಿಸಿಡುವರು. ಮಿಂದು ಮಡಿಯುಟ್ಟ ನೀರಗಚ್ಚೆ ಬಿಗಿದ ಪಾರ್ವತಿಯು ಪ್ರವೇಶಿಸಿ ಜಲಪಾತ್ರದಿಂದ ನೆಲವನ್ನು ಪ್ರೋಕ್ಷಿಸಿ ಯಜ್ಞ ಕುಂಡದ ಪಕ್ಕದಲ್ಲಿ ಮಳಲಿನಿಂದ ಲಿಂಗವನ್ನು ನಿರ್ಮಿಸಿ ನಮಸ್ಕರಿಸುವಳು)

ಪಾರ್ವತಿ--

ನಮೋ ಲೋಕಾಧಿನಾಥಾಯ ನಮಃ ಪ್ರಲಯ ರೂಪಿಣೇ
ತಮೋ ರಾಜಸ ಸತ್ವಾಂತಃಕರಣಾಯ ನಮೋ ನಮಃ

ಓಂ ನಮಃ ಶಿವಾಯ
(ಮೊಳಕಾಲೂರಿ) ಓಂ ನಮಃ ಶಿವಾಯ
(ಎದ್ದುನಿಂತು ಕೈಮುಗಿದು) ಓಂ ನಮಃ ಶಿವಾಯ
(ನೃತ್ಯ ಭಂಗಿಯಲ್ಲಿ) ಓಂ ನಮಃ ಶಿವಾಯ

ಓಂ ಶಿವಶಂಕರ ಶಂಭು ಸದಾಶಿವ
ಓಂಕಾರಾರ್ಚಿತ ಪರಾತ್ಪರ
ಓಂ ಪರಮೇಶ್ವರ ವರಗಂಗಾಧರ
ಚಂದ್ರವಮೌಳಿ ಜಗದಾಧಾರ

ಓಂ ಮೃತ್ಯುಂಜಯ ಸುರಮುನಿಗೇಯ
ತ್ರ್ಯಂಬಕ ರುದ್ರ ಮಹೇಶ್ವರ
ವ್ಯೋಮಕೇಶ ವಿಷಕಂಠ ದಿಗಂಬರ
ಪಶುಪತಿ ಪುಣ್ಯ ಪಿನಾಕಧರ

ಓಂ ಡಮಡಮಡಮ ಡಮರು ಜಯಧ್ವನಿ
ಜಾಗೃತ ಸರ್ವ ಜಗದ್ಬೀಜ
ಕುಂತಲಭೂಷಿತ ಫಣಿಗಣ ಜೃಂಭಿತ
ಪ್ರಳಯ ಪದಂಗತ ನಟರಾಜ

ಸ್ಫುರದುದ್ಭಾಸಿತ ಜಟಾಜೂಟ ಪರಿ
ಕಲ್ಪಿತ ಜಗಜಗ ಜಗದ್ಕಿರಣ
ಕಿರದುನ್ಮತ್ತ ಲಲಾಟ ತಟೇಕ್ಷಣ
ದಿಗ್ತಟ ಧಗ ಧಗ ಧಗ್ದ ದಹನ

ಓಂ ನಮಃ ಶಿವಾಯ
ಓಂ ನಮಃ ಶಿವಾಯ

ಸ್ಖಲದಾನಂದ ತರಂಗ ಸುಧಾಂಶು ಸ
ಮರ್ಪಿತ ಶೀತಲ ಶೃಂಗಾರ
ಖಲದಾನವಕುಲ ಸಂಹಾರೋದ್ಧೃತ
ಘನಶೂಲ ಧುರಂಧರ ವೀರ.

ಅಪರಾಜಿತ ಮೃದುಹಾಸ್ಯ ಸಮಾವೃತ
ಮುನಿಜನ ಕರುಣಾರಸ ಪಾತ್ರ

ತ್ರಿಪುರ ಭಯಂಕರ ಭ್ರಕುಟಿತಟ ಭ್ರುಮ
ಣೋರ್ಜಿತ ರೌದ್ರಾರುಣ ನೇತ್ರ!

ಬಹುಭೂತಾಪ್ಲುತ ವೇಷ ಸಮಾವೃತ
ಗಜ ಚರ್ಮಾಂಬರ ಬೀಭತ್ಸ
ಅಹ! ನಟನೋದಿತ ತೋಂ ತಕ ಧಿಮಿತಕ
ನಾದ ಪವಿತ್ರಿತ ಕೈಲಾಸ!

ಸ್ಫುರದುದ್ಭಾಸಿತ ಜಟಾಜೂಟ ಪರಿ
ಕಲ್ಪಿತ ಜಗಜಗ ಜಗದ್ಕಿರಣ
ಕಿರದುನ್ಮತ್ತ ಲಲಾಟತಟೇಕ್ಷಣ
ದಿಗ್ತಟ ಧಗಧಗ ಧಗದ್ದಹನ!

ಓಂ ಡಮಡಮಡಮ ಡಮರು ಜಯಧ್ವನಿ
ಜಾಗೃತ ಸರ್ವ ಜಗದ್ಬೀಜ
ಕುಂಡಲಭೂಷಿತ ಫಣಿಗಣಜೃಂಭಿತ
ಪ್ರಳಯ ಪದಂಗತ ನಟರಾಜ!

ನಮೋಲೋಕಾಧಿನಾಥಾಯ ನಮಃ ಪ್ರಲಯರೂಪಿಣೇ
ತಮೋ ರಾಜಸ ಸತ್ವಾಂತಃಕರಣಾಯ ನಮೋನಮಃ

ಓಂ ನಮಃ ಶಿವಾಯ
ಓಂ ನಮಃ ಶಿವಾಯ
ಓಂ ನಮಃ ಶಿವಾಯ
ಓಂ ನಮಃ ಶಿವಾಯ

(ನಮಸ್ಕರಿಸಿ ಕುಳಿತುಕೊಳ್ಳುವಳು. ನಡನಡುಗುತ್ತ ಹೊದಿಕೆ ಹೊದೆದು ಕೊಂಡು ಕೆಮ್ಮುತ್ತ ವೃದ್ಧತಾಪಸನ ಪ್ರವೇಶ)

ತಾಪಸ—

ಅಬ್ಬಬ್ಬ ! ನಡನಡುಗುತಿದೆ ಚಳಿಯ ಭರಕೆ ಕೈ
ಕಾಲು ತಾನರಳಿಯೆಲೆಯಂತೆ
ತಬ್ಬಿ ಕರುಳನು ಹಿಂಡಿ ಯೆದೆಯನೇ ಕರಕರನೆ
ಕೊರೆದಿಹುದು ತಿರುಚೇಣಿನಂತೆ

ಎಂದು ತೋರದ ಚಳಿಯಿದೇನು? ಮುಂಜಾವವೇ
ಮುಸುಕಿರುವ ಹಿಮದ ಹೆಚ್ಚಾಟ
ಇಂಬು ಗಾಣದ ನೇಸರಿಬ್ಬನಿಯ ಮೋಡದಲಿ
ಮುಳುಗಿರುವ ಬಾನ ಗಾಳಿಪಟ

(ಸುತ್ತಲೂ ಕಣ್ಣುದುರಿಸಿ ನೋಡಿ)

ಎತ್ತ ಕಡೆ ಬಂದಿರುವೆನಿಲ್ಲಿ? ಮುಂಗಡೆ ಕಾಂಬ
ಯಜ್ಞವೇದಿಕೆಯು ಸಂಭಾರ
ಮತ್ತೆ ಬೇಕಾದುದುಂಟಲ್ಲಿ ಹಣ ಹಣ ಹಣಕಿ
ತೋರುತಿದೆ ಬೆಂಕಿಯವತಾರ

(ಒಂದು ಹೆಜ್ಜೆ ಮೆಲ್ಲನೆ ಮುಂದಿಟ್ಟು ಪಾರ್ವತೀ ಸಖಿಯರನ್ನು ಕಂಡು)

ಅರೆ! ಕಾಡ ಕೊಂಪೆಯಲಿ ಏನು ಚಿಗುರಿದ ಚೆಲುವಿ
ನೆಣೆಗೊಂಡ ಮಾಧುರ್ಯಚಿತ್ರ
ಬರಗೊಂಡ ತಾಪಸರ ತಪ್ಪಲಿದು ಸಿರಿಸೋನೆ
ಯರಿಕೆಯಿಂದಾಗಿದೆ ಪವಿತ್ರ !

(ಸಖಿಯರು ಅಪಹಾಸ್ಯವಾಗಿ ತಮ್ಮೊಳಗೆ ನಗುತ್ತ)

ಮಾಲಿನಿ— ಬಂತಲ್ಲ ನಮ್ಮ ಮನೆಬಾಗಿಲಿಗೆ ಸೌಭಾಗ್ಯ
ದಂತರಿಕ್ಷದೆ ಸುರಿದ ಪುಣ್ಯ
ಇಂತೆಲ್ಲ ತಪಗೊಂಡ ನಮ್ಮ ಚೆಲು ಪಾರ್ವತಿಯ
ಸಾರ್ಥಕವದಾಯ್ತು ತಾರುಣ್ಯ!

ಶಾಲಿನಿ— ವರುಷಕಳೆಯಲು ಶ್ರಮದ ಬೀಜಬಿತ್ತಿದಬೆಳೆಯು
ಹಸನಾಗಿ ಬಂದಿರುವುದೀಗ
ಹರುಷದಲಿ ಕೈಗೊಂಡು ತಿನುವುದೊಂದೇ ಸಾಕು
ಸಾಕಿದೇ ನಮ್ಮ ಸಗ್ಗ!

(ವೃದ್ಧ ತಾಪಸನು ಮತ್ತೂ ಮುಂದಕೆ ಯಜ್ಞವೇದಿಕೆಯತ್ತ ಕುಳಿತ ಪಾರ್ವತಿಯನ್ನು ಕಂಡು ಆಶ್ಚರ್ಯಪಡುವನ್ನ ಆಕೆ ಮುಂದೆ ಬಂದು ನಮಸ್ಕರಿಸುವಳು.)

ತಾಪಸ—(ಅಸಮಾಧಾನದಿಂದ ಮೂಗುಮುರಿದು)

ಏನಿದಪಚಾರ! ತಾಪಸಜನರ ಮುಂದಿಟ್ಟ
ಪ್ರಶ್ನೆಯಂತಿದೆ ನಿನ್ನ ವೇಷ
ಏನು ಮದನನ ಕತಕೆ ತವಸುಗೊಂಡಿಹ ರತಿಯೆ?
ಏತಕೀ ನಿರ್ಜನ ನಿವಾಸ?

ಪಾರ್ವತಿ—(ನಸುನಗುತ್ತ)

ನಾಂ ತುಹಿನಗಿರಿರಾಜನಣುಗೆ ಮನಸೊಪ್ಪಿ ತಾ
ಪಸ್ಯದಲಿ ನಿಂದಿರುವೆನಿಲ್ಲಿ
ಈ ಠಾವು ನಿಮ್ಮ ಪದಸೇವೆಗಾಗಿದೆ ಕುಶಲ
ವೇನು ನಿಮ್ಮಾಶ್ರಮದ ಬವಳಿ?

ತಾಪಸ—(ಮುಂಚಿತವಾಗಿ ಬೆಂಕಿಯ ಬಳಿ ಕುಳಿತು ಚಳಿಕಾಯಿಸಿಕೊಳ್ಳುತ್ತ)

ನಮ್ಮನುಷ್ಠಾನಕೀ ಧವಳಶಿರಸೇ ಸಾಕ್ಷಿ
ನೋಡೆಮ್ಮದವಧೂತ ಮಾರ್ಗ
ನಾವು ಕಾಮುನನೊಟ್ಟಿದವರು ಕಷ್ಟದ ವಿಷವ
ನುಂಡವರು ನಿತ್ಯಾಪವರ್ಗ!

(ಕೈಯಾಡಿಸಿ)

ಸಾಕು ನಮ್ಮ ವಿಚಾರ! ನಿನ್ನದಿದು ಮಲರಿನಿಂ
ಮುಳ್ಳು ತೆಗೆಯುವ ಮನಸಿನದಟು

ಈ ಹುಬ್ಬಿನೆಡೆಗಳಲಿ ಸುಳಿವ ಕಣ್ಣಿನ ಬಾಣ
ಗೆಲದಿರುವ ಗುರಿಯಾವುದುಂಟು?

ಬಳ್ಳಿ ಮೈ ಬತ್ತಿರುವುದೀ ತಪಸ್ಯಾಧಿಯಲಿ
ನಿನಗೇನು ಹತ್ತಿರುವ ಜಂಭ?
ಕೆಂಪು ತುಟಿಯುಣುವ ಸವಿಯಲ್ಲವೀ ಪಾಷಾಣ
ದೇಹವೇ ಜ್ಞಾನದಾರಂಭ!

ಮಧುಮಾಸ ನಿನಗೆ ಸುಶ್ರಾವಣವು ನಿನಗೆ ಹೂ
ಮಳೆಯು ಮೆಚ್ಚಿನ ಶರತ್ಕಾಲ
ಅದೆ ಸಾಕು! ಮತ್ತುಳಿದ ಬಿಸಿಲು ಮಳೆ ಚಳಿಯ ದು
ರ್ಮಾರ್ಗದಲಿ ನಡೆದಿರಲು ಸಲ್ಲ

ನಿನ್ನಯ್ಯ ಸರಮನೆಯಲುಂಡವರು ನಾವು ಮ
ತ್ತವನ ಹಿತವೇ ನಮ್ಮ ಕಾರ್ಯ
ಇನ್ನು ಬಿಡು ಹುಡುಗಾಟ ಸಾಕು ತೆರಳತ್ತ ಕಡೆ
ನಮ್ಮ ನುಡಿ ನಡೆವುದನಿವಾರ್ಯ!

(ಪಾರ್ವತಿ ದೂರದಲ್ಲಿ ಕುಳಿತ ಸಖಿಯತ್ತ ಕಂಡು ಕಣ್ಣು ಸನ್ನೆ ಮಾಡುವಳು)

ಮಾಲಿನಿ—(ತಾಪಸನ ಮುಂದೆ ಬಂದು ವಿನಯವಾಗಿ)

ಜೀಯ ನಿಮ್ಮೆಣಿಕೆ ಮತ್ತೀತೆರದ ವಾತ್ಸಲ್ಯ
ಕಾವು ಋಣಿಗಳು ನಮಸ್ಕಾರ
ಈಯರಣಿಯಲಿ ಕಂಡ ಬೆಂಕಿ ಕೂಳ್ ಸುಡಲಲ್ಲ
ಯಜ್ಞಕೆಂದುರಿವ ಸಂಸ್ಕಾರ

ವರುಷವೊಂದಕೆ ಹಿಂದೆ ಈ ತಪೋಭೂಮಿಯೇ
ತಾನಾಯ್ತು ಶಿವನ ಕೈಲಾಸ
ಏನೊ ಕಾರಣಕಾಗಿ ತನ್ನನೇ ತಾಕಂಡ
ತಪಸಿನಾತ್ಮೀಯ ವಿಶ್ವಾಸ

ನಿಂತಳಾಕಡೆ ಗೌರಿ ಶೈಲರಾಜ ಕುಮಾರಿ
ಯಾ ಮಹೇಶನ ಸೇವೆಗಾಗಿ
ನೋಂತ ಮಲ್ಲಿಗೆ ಹೂ ವಸಂತ ಮಾಸದ ಕಡೆಗೆ
ಬಾಗಿ ನಮಿಸುವ ಸುಕೃತವಾಗಿ

ಏನೊ ಕೊನೆಗೊಂದು ದಿನ ಸಂಹಾರ ರುದ್ರನಲಿ
ಹುದುಗಿರುವ ಕುದಿವ ಸಿಟ್ಟು
ಈ ನನೆಯ ಮೇಲೆ ಕಣ್ತುಂಬಿಕೂಡುವ ಸಮಯ
ಕೆದರಿತ್ತು ಕಾಮನನೆ ಸುಟ್ಟು!

ಮಿಂಚೊಂದು ಮಿನುಗಿ ಬರಸಿಡಿಲು ಬಿದ್ದಂತಾಯ್ತು
ರಸಬಾಳೆ ಧರಣಿಗೊರಗಿತ್ತು
ಆದರೇನೆದೆಗೊಂಡ ಜ್ಯೋತಿಯನುಗಮದ ಬಂ
ಗಾರದೊಂದೈಸಿರಿಯ ಹೊತ್ತು

ಅಂದಿನಿಂದಿನ್ನೆವರವದಕಾಗಿ ಕಾತರಿಸಿ
ಬೆಳಗಿರುವ ಕತ್ತಲೆಯ ಜ್ಯೋತಿ
ಇಂದುಶೇಖರನ ಪದದಾಸೆಯಲಿ ಕರಕರಗಿ
ಕಾದಿರುವ ಸಾತ್ವಿಕಾಸಕ್ತಿ

ಓಂ ಶಿವೇತಿಸ್ನಾನ ಓಂ ಶಿವೇತಿ ಧ್ಯಾನ
ಓಂ ಓಂ ಶಿವೇತ್ಯಧಿಷ್ಠಾನ
ಓಂ ಶಿವೇತಿಸ್ತವನ ನಿತ್ಯ ನರ್ತನಗಾನ
ಓಂ ಶಿವೇತ್ಯನುರತ ಪ್ರಾಣ!

(ಇಷ್ಟು ನುಡಿದು ಸಖಿಯೂ ಸುಮ್ಮನಾಗುವಳು. ತಾಪಸನು ಪಾರ್ವತಿಯ ನ್ನೊಮ್ಮೆ ನೋಡಿ ತಲೆದೂಗುತ್ತ)

ತಾಪಸ—

ಈತನಕ ತಿಳಿದಿದ್ದೆ ನಿದನು ಹುಡುಗಾಟವೆಂ
ದೀಗರಿಕೆಯಾಯ್ತಿವಳ ಹುಚ್ಚು

ಯಾರಿಗೊಪ್ಪಿತವಲ್ಲದಾ ಕಡೆಗೆ ನೀಳ್ಕರಿಸಿ
ಮಸಣ ಬಾಳುವೆಗೊಳುವ ಮೆಚ್ಚು!
(ಉಪಹಾಸವಾಗಿ)

ಏಕೊ ಶಿವನೆಂದು ಬರೆ ಹೆಸರನಿಟ್ಟರು ನಿತ್ಯ
ದುಃಖದಲಿ ಬೇಡುತಿಹ ದುರುಳ
ಲೋಕ ಲೋಕವೆ ನಾಚುತಿರುವ ನಿರ್ವಾಣದಲಿ
ಕುಣಿ ಕುಣಿವ ಬತ್ತಲೆಯ ಮರುಳ

ಹಲವು ಭೂತ ಪ್ರೇತದೊತ್ತಿನಲಿ ಮೆರೆವವಗೆ
ಮನೆಮಾರು ಮಟವೆಲ್ಲಿ ಬೇಕು?
ಹೊಲೆಗೊಂಡ ತಲೆಬುರುಡೆಗಳ ಮಾಲೆ ಹೊತ್ತವಗೆ
ಬೂದಿಯೊಂದಿದ್ದರದೆ ಸಾಕು!

ಪಾರ್ವತಿ—(ಸಮಾಧಾನವಾಗಿ)

ಸುಖವೆಂದರೇನುಂಟು ದುಃಖವೇನುಂಟು ಸಮ
ಧರ್ಮದಲಿ ಮೆರೆವ ಪರಮೇಶ
ನಿಖಿಲ ವಿಶ್ವಾಂಬರನೊ ವರದಿಗಂಬರನೊ ನಿ
ಮ್ಮೆಣಿಕೆಯರಿಯದ ವಸ್ತ್ರವೇಷ

ಲೋಕದಲಿ ಕೆಡುಧರ್ಮವಿವನೊಕ್ಕಲಾಗಿ ತಲೆ
ಬಾಗಿ ಬಿನ್ನೈಸುತಿಹ ಶಕ್ತಿ
ಸಾಕು ಸುಮ್ಮನೆ ತಲೆಯನೇಕೆ ಕಂಡಿರಿ? ನಿಮ್ಮ
ಕಲ್ಪನೆಗೆ ನಿಲುಕದ ವಿರಕ್ತಿ

ತಾಪಸ—(ತಲೆದೂಗಿ)

ಮಾತಿಗಾಯಿತು ಮಾತು! ಮತ್ತೆ ಮಾಪನಕೊಂದು
ಮಡದಿಮನೆ ಮಾರುಳಿದ ಮಂಗ

ಈತನಲಿ ಸುಖವೇನನಾಯಲಪ್ಪುದು ಗೌರಿ
ಕಾಮನನೆ ಕೊಂದ ಮಾಲಿಂಗ!

ಮೆತ್ತನೆಯ ಸಜ್ಜೆಯಲಿ ಮುಳ್ಳು ಕಾಣುವ ಮೈಗೆ
ಹೂವಿನಂತಾಸರವೆ ಲೇಸು
ಎತ್ತಲೋ ಗಜಚರ್ಮ ಹೊತ್ತ ಕಾಠಿಣ್ಯದಲಿ
ಚಿತ್ತೈಸುತಿಹುದೇನು ಹೊಲಸು!

ಪಾರ್ವತಿ—(ಕೊಂಚ ವ್ಯಸ್ತಳಾಗಿ)

ಮಾತು ಮುಗಿಯಿತೆ? ನಿಮ್ಮ ಮನಸಿಗೇತಕೆ ಬಾರ
ದಾ ಚಂದ್ರಕಿರಣದಾನಂದ?
ಶೀತಶೀಕರದ ರಸಗಂಗೆಯಾಸೇಚನೆಯ
ಕೈಲಾಸಶಿಖರದನುಬಂಧ!

ಸಾಕು ನಿಮ್ಮೊಡನಾಡಿ ನಾಂ ಕೊಳುವುದೇನುಂಟು
ಬರಿದೆ ಬಾಯ್ಬುತ್ತುವ ವಿಲಾಪ
ಈ ಧರ್ಮವೇ ನನಗೆ ನಿಮ್ಮ ಕರ್ಮವು ನಿಮಗೆ
ನಿಮ್ಮ ನುಡಿಕೇಳುವುದೆ ಪಾಪ!

(ಪಾರ್ವತಿ ಮುಖ ತಿರುಗಿಸಿ ದೂರ ಕುಳಿತು ತನ್ನ ಮುಂದೆ ಮಳಲ ಲಿಂಗವನ್ನು ನಿರ್ಮಿಸಿ ಪೂಜಿಸತೊಡಗುವಳು. ಅಂತೆಯೇ ಸಖಿಯರೂ ಸಿಟ್ಟಿನಿಂದ ಮುಖ ತಿರುಗಿಸಿ ಅವಳನ್ನು ಸಹಕರಿಸುವರು.)

ತಾಪಸ—

ಕೋಪವಿದು ತರವಲ್ಲವಾಹುಚ್ಚನೊಡನಾಟ
ಸಲ್ಲದೆಂದೇ ನುಡಿದೆನೆಲ್ಲ
ಸೀಂದುಡುಕಿ ದುಮುಕಿದರೆ ಮತ್ತೆನಾಚುವ ನಿನ್ನ
ಕೆಂಪಾಗಿ ಕಾಣಲಿದೆ ಗಲ್ಲ!

(ಪಾರ್ವತಿ ಅದನ್ನು ಗಮನಿಸದೆ ತನ್ನಷ್ಟಕ್ಕೇ ಓಂ ನಮಃಶಿವಾಯ ಎಂದು ಮಂತ್ರೋಚ್ಚಾರ ಪೂರ್ವಕ ಲಿಂಗಕ್ಕೆ ಪುಷ್ಪಾರ್ಚನೆಯನ್ನು ಸಲ್ಲಿಸುವಳು)

ಇದು ಪಾದಮೂಲಕ್ಕೆ ಇದು ವ್ಯೋಮಕೇಶಕ್ಕೆ
ಇದು ದಿವ್ಯ ಸಂತೋಷಕೆ
ಇದು ಲೋಕ ಲೋಕ ಕವಲೊಡೆದ ನಿನ್ನವಯವಕೆ
ಇದು ಕಲ್ಪದಾಕ್ರೋಶಕೆ!

(ಪಾರ್ವತಿ ಒಪ್ಪಿಸಿದ ಹೂಗಳೆಲ್ಲ ಮಾಯವಾಗುವುವು. ಪಾರ್ವತಿ ವ್ಯಸ್ತಳಾಗಿ ಸಖಿಯ ಮುಖ ನೋಡುವಳು. ಸಖಿಯು ಪ್ರತಿಸಖಿಯ ಮುಖವನ್ನು ನೋಡುವಳು. ಆದರೆ ಯಾರೂ ಹಿಂದಿರುಗಿ ವೃದ್ಧ ತಾಪಸನ ಕಡೆ ನೋಡುವುದಿಲ್ಲ. ಕೊನೆಗೆ ಪಾರ್ವತಿಯು ಹಣ್ಣು ಹಂಪಲುಗಳನ್ನು ಸಮರ್ಪಿಸಿ ಕೈಮುಗಿದು ಎಲ್ಲರೂ ಕಣ್ಣು ಮುಚ್ಚಿಕೊಳ್ಳುವರು. ಕಣ್ಣು ತೆರೆದಾಗ ಅವು ಅಲ್ಲಿರುವುದಿಲ್ಲ.)

ಶಾಲಿನಿ—(ಒಮ್ಮೆಗೇ ಸಂಶಯದಿಂದ ಹಿಂದಿರುಗಿ ತಾಪಸನ ಕಡೆ ನೋಡಿ ಅವನ ಮುಂದೆ ಹೂ, ಕೈಯಲ್ಲಿ ಹಣ್ಣುಗಳಿರುವುದನ್ನು ಕಂಡು ಕೋಪದಿಂದ)

ಆಗದಾಗದು ನಿನ್ನ ಮಂತ್ರವಾದದ ಮಾಟ
ನಮ್ಮೆಡೆಯೊಳನುಗೊಳಿಪ ಕವಡು ಬಿಜ್ಜೆ
ಸಾಗುಸಾಗಿಲ್ಲಿಂದ ಸಾಕು ಬರಿ ಹೆಂಗಸರ
ವಂಚಿಸಲು ಬಾರದೇನಿನಿತು ಲಜ್ಜೆ?

(ಎದ್ದು ನಿಲ್ಲುವಳು. ಪಾರ್ವತಿಯು ಅವಳ ಕೈಹಿಡಿದು ತಡೆದು ಕ್ಷಣಕಾಲ ಧ್ಯಾನಾಸಕ್ತಳಾಗಿ ತಾನೇ ಗುಣುಗುಟ್ಟುವಳು)

ನಮ್ಮನುಷ್ಠಾನಕೀ ಧವಲಶಿರಸೇಸಾಕ್ಷಿ
ನೋಡೆಮ್ಮದವಧೂತ ಮಾರ್ಗ
ನಾವು ಕಾಮನನೊಟ್ಟಿದವರು ಕಷ್ಟದ ವಿಷವ
ನುಂಡವರು ನಿತ್ಯಾಪವರ್ಗ!

(ಕಣ್ಮುಚ್ಚಿದ್ದು ತಾವರೆಯೊಂದನ್ನು ಭಕ್ತಿಪುರಃಸರವಾಗಿ ಲಿಂಗದ ಮೇಲಿಡಲು ಅದು ತಾಪಸನ ತಲೆಯ ಮೇಲಿರುವುದು)

ಪಾರ್ವತಿ— (ಧಿಗ್ಗನೆದ್ದು ತಾಪಸನ ಕಾಲಿಗೆರಗಿ)

ಕ್ಷಮಿಪುದೆಮ್ಮನು ನಾಥ! ನಮ್ಮದಾಯ್ತಪಚಾರ
ಪ್ರೇಮುಗ್ಧೆಯೊಡನೇಕೆ ಸರಸದಾಟ
ಪ್ರೇಮದೊಸರಿನ ಗುಟುಕು ಜೀವತುಳುಕಿದೆ. ನಿಮ್ಮ
ವಾರಾಶಿಯಲಿ ಸೇರಲೆಂಬುದೆ ಹಟ!

ಶಿವನೆ ನನ್ನಾವೇಗ ಶಿವನೆ ನನ್ನನುರಾಗ
ಶಿವನೆ ನನ್ನಾಶ್ರಯದ ಜೀವಭಾಗ
ಶಿವನೆಂದೆ ಶಿವನೆಂದೆ ಶಿವನೆಂದೆ ನಿತ್ಯಸಂ
ಕಲ್ಪದಲಿ ನನ್ನೆದೆಯು ಮಿಡಿವರಾಗ

ಮಾತು ನಿನಗರ್ಪಿತ ಮನಸು ನಿನಗರ್ಪಿತ
ದೇಹ ನಿನಗರ್ಪಿತ ಶೈವಾರ್ಪಿತ
ನೀನೆ ಕಾರುಣ್ಯದಲಿ ಕೈವಿಡಿದು ಸಲಹೆನ್ನ
ನಿನ್ನ ನೆಳಲಾಗಿ ನಾ ಬರುವೆನತ್ತ!

(ವೃದ್ಧ ತಾಪಸನು ಹೊದಿಕೆ ತೆಗೆದು ಬಿಸುಟು ಎದ್ದು ನಿಂತಾಗ ಶಿವನಾಗಿ ಪರಿವರ್ತನೆಗೊಳ್ಳುವನು. ಸಖಿಯರು ಆಶ್ಚರ್ಯದಿಂದ ಹಿಂದೆ ಸರಿದು ಕೈಮುಗಿದು ನಿಲ್ಲುವರು.)

ಶಿವ—(ಪಾರ್ವತಿಯನ್ನು ಎತ್ತಿಹಿಡಿದು ನಸುನಗುತ್ತ)

ಶಿವನಶಿವ ರೂಪನೋಡಿಂದು ಮಾಯಕವಾಗಿ
ಮಂಗಲೆಯು ಕೂಡಿ ಮಾಂಗಲ್ಯವಾಯ್ತು
ಶಿವನ ಮಸಣದ ಬಾಳು ಗೌರಿಯನುರಾಗದಲಿ
ನೆಲೆಗೊಂಡ ಶೃಂಗಾರ ಶರಣವಾಯ್ತು!

ನನ್ನ ಕಂಡವರುಂಟು ನನ್ನನರಿತವರುಂಟು
ನನ್ನ ಕೊಂಡಾಡಿ ವರಗೊಂಡರೆಲ್ಲ

ನನ್ನತನಕಾಗಿ ಮನವೈಸಿ ನೀನೆನ್ನನೇ
ನಿನ್ನದಾಗಿಸುತ ವರಗೊಂಡೆಯಲ್ಲ!

(ಗೌರಿ ನಾಚಿ ತಲೆತಗ್ಗಿಸಿ ನಿಂತಿರುವಳು. ಸಖಿಯರು ಮುಂದೆ ಬಂದು ಇಬ್ಬರಿಗೂ ನಮಸ್ಕರಿಸಿ ಸಂತೋಷದಿಂದ)

ಸಖಿಯರು—

ಮನೆಗೆ ಬಂದಳು ಮಂಗಳ ಗೌರಿಯು
ತನ್ನಿರಿ ಸೊಗಸಿನ ಬಾಗೀನ
ತನಗೆ ತಾನೇ ಸೆರೆಗೊಂಡಿಹ ಹೂ
ಹಣ್ಣಿನ ಹರಕೆಯು ಚೈತ್ರವನ
ಎಂದೋಸುಟ್ಟಿಹ ಕಾಮನ ಕೂರ್ಗಣೆ
ವೈಗಂಡಿದೆ ಮಧು ಕಲಿಕೆಯಲಿ
ಇಂದ್ರಚಾಪದನುರಾಗದ ವಿಧ ವಿಧ
ಬಣ್ಣದ ಮನಸಿನ ವೊಳಕೆಯಲಿ
ಶೃಂಗಾರದ ರಸಗೀತಿಯು ಪುಟಿ ಪುಟಿ
ದೆದ್ದಿದೆ ತನುರೋಮಾಂಚದಲಿ
ತಂಗಾಳಿಯ ತೂಗುಯ್ಯಲೆಯಾಗಿದೆ
ಬಾಳ್ ಬಳ್ಳಿಯು ತೋಳ್ಮಂಚದಲಿ
ಬಾನೇರಿದ ಕಗ್ಗತ್ತಲೆ ಕಳೆಯಿತು
ತಾನೇ ತೋರಿತು ಸಿಂಗಾರ
ತಾನೇ ತೊಡಗಿದ ವಿಶ್ವದ ಶಾಶ್ವತ
ಶಿವಪಾರ್ವತಿಯರ ಸಂಸಾರ!
ಮನೆಗೆ ಬಂದಳು ಮಂಗಳಗೌರಿಯು
ತನ್ನಿರಿ ಸಾವಿರ ಫಲದಾನ
ತನಗೆತಾನೇ ತುಂಬಿದ ತೋಷದ
ತಿಂಗಳ ಹಾಲಿನ ಪರಮಾನ್ನ

ಕಂಗಳ ಮರೆಯಲಿ ಹೊಂಚುವ ನೋಟದ
ನಚ್ಚಿನ ನವಿಲೋ ಕುಣಿದಿಹುದು
ಬಂಗಾರದ ವೈಬಣ್ಣದ ಬಲ್ಮೊಲೆ
ಯೆಣೆವಕ್ಕಿಯು ಬಗೆ ತಣಿದಿಹುದು

ಸುಂದರವದನೆಯ ಮಂಜುಲ ಹಾಸದ
ತುಂಬಿದ ಪರಿಮಳದರವಿಂದ
ಇಂಬಾಯಿತು ನೆರೆನಂಬಿದ ಶಿವ ರೋ
ಲಂಬದ ಮಾನಸ ಮಕರಂದ

ಇಂದೊದಗಿತು ಚೆಲುಚಿತ್ರಕೆ ಕುಂದಣ
ಮಂಗಲ ಪುಷ್ಪಕೆ ಹರಿವಾಣ
ಬಂದ ಮಾವಿನ ವಿಶಾಲತೆಯಾಶ್ರಯ
ಮಲ್ಲಿಗೆಗಾಯಿತು--ಶಿವಾರ್ಪಣ!

(ಕೈತಟ್ಟಿ ಕುಣಿಯುತ್ತ)

ಬೆಳ್ಳನ್ನ ಬೆಟ್ಟದಲಿ ಬೆಳ್ಳನ್ನ ಬಾನಹೊಳೆ
ಬೆಳ್ಳನ್ನ ತಿಂಗಳನ ಹಾಲ್ ಹೆಚ್ಚಳ
ಬೆಳ್ಳನ್ನ ಶಿವನೊಡನೆ ಬೆಳ್ಳನ್ನ ಗೌರಿ ಕಲೆ
ತೊಳ್ಳಿತಾಗಲಿ ನಿತ್ಯಶುಭ ಮಂಗಳ!

೩—೯—೧೯೫೭

ದಿವ್ಯದರ್ಶನ

ಪಾತ್ರವರ್ಗ

ಮುಕುಲಾ
ಮಾಧವಿ
ರಾಧೆ
ಚಂದ್ರಾವಳಿ
ಕೃಷ್ಣ

ಪ್ರವೇಶ—ಗೋಪಕನ್ಯೆಯರು. ದೃಶ್ಯ—ಉಪವನ.

(ಸಂಜೆ ಹೊತ್ತು, ಗೋಕುಲದ ಉಪವನದಲ್ಲಿ ಗೋಪಲಲನೆಯರಿಬ್ಬರು)

ಮುಕುಲಾ— ಮಧುಮಾಸವು ಬಂದಿರುವುದು
ಎದೆ ಬಾಗಿಲ ತೆರೆದಿಹುದು
ಮೃದುಹಾಸದ ಮಾಂಗಲ್ಯದ
ಸವಿಸೋನೆಯನೆರೆದಿಹುದು

ವಿಧವಿಧ ಪುಷ್ಪಂಗಳ ಸೆಲೆ
ಗೊದಗಿದೆ ತನಿಜೇನೊರತೆ
ಮದ ಮಂಜುಲಗೀತದ ಬಂ
ಡುಣಿಗಳ ಪಿಸುಮಾತುಕತೆ

ಹೊಂಬಯಲಲಿ ತಲೆ ತೂಗುವ
ಕಳಮೆಯ ಶೃಂಗಾರ ಶತ
ನೆಲಜಲದಾನಂದದ ನವ
ಚೈತನ್ಯದ ಕುಣಿ ಕುಣಿತ

ತಂಗಾಳಿಯ ವೈಹಾಳಿಯ
ಸಂಗೀತದ ವಿನ್ಯಾಸ
ರಂಗಯ್ಯನ ಕೊಳಲಿನ ಪಡಿ
ಯೊತ್ತಿದ ಜಗದುಲ್ಲಾಸ !

ಮಾಧವಿ—(ಕಿವಿಗೊಟ್ಟು ಕೇಳಿ)
ಕಾಲಿಂದಿಯ ತೀರದಲಿ
ನಲುಮೆಯ ಮುಚ್ಚಂಜೆಯಲಿ
ಮೃದು ಮುರಲೀಗಾನದುಲಿ
ಅದೊ! ಕೇಳುತಲಿಹುದು
ಸಂಸಾರದ ಸೂಳಿನಲಿ
ಸುಗಿದಿರುವೀ ಬಾಳಿನಲಿ
ಸೊದೆಯೂಡುವನೇಹದುಲಿ
ಅದೊ! ಕೇಳುತಲಿಹುದು
ಮುಗಿದಿರುವೀ ಮನದಾಸೆ
ಮುಕುಲಂಗಳನಳವಡಿಸೆ
ಮುಂಬೆಳಗಿನ ತನಿಸೇಸೆ
ಅದೊ! ಸೂಸುತಲಿಹುದು
ವಿರಹಾಧಿಯು ಗೋಳ್ಗುಡಿಸೆ
ಕರಣಂಗಳ ಕಳೆಗೊಳಿಸೆ
ಬಾವನ್ನದ ಮಿದುವಾಸೆ
ಅದೊ! ಸೈತಿಡುತಿಹುದು

ಮುಕುಲಾ— ಅಭಿಸಾರಿಕೆ ಸುಳಿಸುಳಿದು
ಮುಂಗಾಣದೆ ನವೆದಿರಲು
ಮನದಾಣ್ಮನ ನಿಡುಸುಯ್ಲು
ಅದೊ! ಕೈಗುಡುತಿಹುದು

ದಿನ ದಿನದೊಳು ಮಿಗುವರಿದು
ಬಯಲಾಸೆಯೆ ಚಿಗಿದಿರಲು
ಮುಂಜಾವದ ಸವಿಗನಸು
ಅದೊ! ತೂಪಿಡುತಿಹುದು
ಬೇಸಗೆಯೊಳು ಕಡುನೊಂದು
ಸೋಗೆಯ ಸೊಬಗಳಿದಂದು
ಗರಿಮೋಡದ ಮೊಳಗೊಂದು
ಸವಿದೋರುತಲಿಹುದು
ಅದೆ ಭೋಗದ ಕರೆಯೆಂದು
ಅದೆ ಯೋಗದ ಗುರಿಯೆಂದು
ಎದೆಯುಸಿರಿನ ತೆರೆಯೊಂದು
ಕರೆಗಣ್ಮುತಲಿಹುದು!

ಮುಕುಲಾ—ಮಾಧವಿ—
ಆ ಮಹಿಮೆಯ ಮಾಧುರ್ಯಕೆ
ಮೈಗೂಡಲು ಹೋಗುವ ಬಾ!
ಆ ಪುಣ್ಯದ ಪರವಶತೆಗೆ
ತಲೆಬಾಗಲು ಹೋಗುವ ಬಾ!
ಆ ದೈವದ ಸನ್ನಿಧಿಯಲಿ
ಸೆರೆಯಾಗಲು ಹೋಗುವ ಬಾ!
ಭವ ಮುಕ್ತಿಯ ಸಾರ್ಥಕ್ಯದ
ಶರಣಾಗತಿಗೊಳ್ಳುವ ಬಾ!

ಮುಕುಲಾ—(ಹಿಂದೆ ನೋಡಿ ತಡೆದು ನಿಂತು)
ಅದೊ ಬಯಕೆಯ ನಿಟ್ಟೋಟಕೆ
ನೆರೆದಿರುವಳು ರಾಧೆ
ತನುಪುಳಕದ ಮನದಳತೆಯ
ದಡ ದಡಿಕೆಯ ಸೇದೆ

ನಗೆ ನೋಟದ ಕಣ್ ಕುಣಿತದ
ಮಮತೆಯ ರತಿರೂಪ
ನವಜೀವನದಭಿಸಾರದ
ಮೃದು ಮೌನ ನಿರೂಪ!

ಮಾಧವಿ— ಬೆರಳಟವಿಸಿ ಗುಣುಗುಣಿಸುವ
ಕಳೆದಿರುಳಿನ ನೆನಪು
ಕೆಳೆಯಾಣ್ಮನ ತನುಸಂಗಕೆ
ತಾರುಣ್ಯದ ತೆರಪು
ಕೊನೆಸಾಗುವ ಸಡಗರದಲಿ
ಸರಿದಿದೆ ಮೇಲ್ಮುಸುಕು
ಗುರಿಯೊಂದೇ ನಡೆ ನಡತೆಗೆ
ಅದೆ ಭಾಗ್ಯದ ಬದುಕು!

ಮುಕುಲಾ— ತಡೆ ನುಡಿಗಳ ಕಡೆಗಾಣಿಸಿ
ನಡೆದಿರುವುದು ನಾಕ
ನಡೆ ಹೆಜ್ಜೆಯು ಹಿನ್ನೋಡದು
ಹಿನ್ನೋಟವು ನರಕ
ಮನಸೊಪ್ಪಿಸಿ ಮೈಮರೆದಿದೆ
ಮಮತೆಯ ಮಮಕಾರ
ರಸಯೋಗದ ಸಾಯುಜ್ಯದ
ಸುಖ ಸಾಕ್ಷಾತ್ಕಾರ!

(ವಿಹ್ವಲ ಚಿತ್ತಳಾದ ರಾಧೆಯ ಪ್ರವೇಶ)

ರಾಧೆ— ಮಧುಮಾಸದ ಸುಮನೋಹರದಿನದಲಿ
ಕೊಳಲೂದುವನವನಾರೆ ಸಖಿ?
ಹೃದಯಾಬ್ಜವನಿದೊ! ಸೆಳೆದೊಯ್ಯುತ ತನಿ
ಸೊದೆಯೊಳಗಾಳುವನಾರೆ ಸಖಿ?

ತಿಳಿಗೊಳದೊಳು ತಂಗಾಳಿಯು ಸುಳಿಯಲು
ಕಿರುದೆರೆಗಳು ತಾವೊಗೆವವೊಲು
ಬಗೆಯಲಿ ಭಾವತರಂಗಗಳೇಳಲು
ಕೊಳಲೂದುವನವನಾರೆ ಸಖಿ?

ಅರಳಿದ ಹೂಗಳ ಪರಿಮಳಕಾತುರ
ಗೊಳುತಿರುವಳಿಗಳ ಬಳಗವೆನೆ
ಕರಣಂಗಳು ಹಾತೊರೆಯುತಲಿರುತಿರೆ
ಕೊಳಲೂದುವನವನಾರೆ ಸಖಿ?

ಭವಸಾಗರದೊಳು ಮುಂಗಾಣದೆ ನೋ
ಡಳುತಿಹ ಜೀವನ ಪಥಿಕರಿಗೆ
ಮೆರೆಯುವ ಮುಕುತಿಯ ಮಾರ್ಗವನುಸಿರುತೆ
ಕೊಳಲೂದುವನವನಾರೆ ಸಖಿ?

ಆ ಕೊಳಲಿನ ದನಿ ಮೋಹದಬಲೆಯೊಳು
ಸಿಲುಕುತೆ ದುಗುಡದ ಕಾಡಿನೊಳು
ಏತಕೆ ಸುಳಿಯುತಲಿಹೆ? ಎಂದೆನುತಲಿ
ಸಾರುತಲಿಹುದದೊ ನೋಡು ಸಖಿ!

ಅಳಿಯದ ಮುಕುತಿಯು ತನಿವಣ್ಣಿಳ ಸವಿ
ಸವಿಯುತೆ ಶಾಂತಿಯ ರಾಜ್ಯದೊಳು
ನಲಿಯುತೆ ಭಕುತಿಯ ಸೊದೆಯನು ಹೀರಲು
ಬಾಯೆನುತಿಹುದದೊ ನೋಡು ಸಖಿ!

ಮಧುಮಾಸದ ಸುಮನೋಹರ ದಿನದೊಳು
ಕೊಳಲೂದುವನವನಾರೆ ಸಖಿ?
ಹೃದಯಾಬ್ಜವನಿದೊ ಸೆಳೆದೊಯ್ಯುತೆ ತನಿ
ಸೊದೆಯೊಳಗಾಳುವನಾರೆ ಸಖಿ?

(ಸುತ್ತಲೂ ನೋಡಿ)

ಎಲ್ಲಿರುವನು ನಮ್ಮ ಕೃಷ್ಣ?
ಭೂಲೋಕದ ಸುಕೃತಕಾಗಿ
ದೈವಿಕತೆಯು ಸುರಿದ ಕಿರಣ!

ಎಲ್ಲಿರುವನು ನಮ್ಮ ಕೃಷ್ಣ?
ಭವದಾಹದ ಶಮನಕಾಗಿ
ಪೂರ್ವಪುಣ್ಯದಮೃತಪಾನ!

ಎಲ್ಲಿರುವನು ನಮ್ಮ ಕೃಷ್ಣ?
ಕ್ಷಣಿಕಜನ್ಮರಕ್ತಿಗಾಗಿ
ಮಮತೆಯುಲಿವ ಮಧುರಗಾನ!

ಎಲ್ಲಿರುವನು ನಮ್ಮ ಕೃಷ್ಣ?
ಸಕಲ ಜೀವ ಮುಕ್ತಿಗಾಗಿ
ಪರಮಾತ್ಮನ ಚಿರಾಹ್ವಾನ!
ಎಲ್ಲಿರುವನು ನಮ್ಮ ಕೃಷ್ಣ?

(ದಿಗ್ಭ್ರಾಂತಳಂತೆ ಸುತ್ತಲೂ ನೋಡಿ ಕೊನೆಗೆ ಮೆಲ್ಲ ಮೆಲ್ಲನೆ ಮುಂದೆ ಹೆಜ್ಜೆಯಿಟ್ಟಾಗ ಸಿಡುಕಿನಿಂದ ಚಂದ್ರಾವಳಿಯ ಪ್ರವೇಶ)

ಚಂದ್ರಾವಳಿ— (ಗೋಪಕನ್ಯೆಯರನ್ನು ನೋಡುತ್ತ ಅವಜ್ಞೆಯಿಂದ)

ಏಂ ಧೂರ್ತತೆ! ಚೆಲುಗಣ್ಣಿಗೆ ಕಟ್ಟಿದ
ಕಾಮನೆಗಳ ಕೃತಿ ವೈಕಲ್ಪ
ಪೆದ್ದಾರಿಯನುಳಿದೆತ್ತಲೊ ಸುಳಿದಿಹ
ಹುಚ್ಚಾಟದ ಸುಖ ಸಂಕಲ್ಪ

ಕೆಂದೂಳಡರಿದ ಕನ್ನಡಿಯಲಿ ಮೊಗ
ಗಾಣುವುದುಂಟೇ ಲಾವಣ್ಯ?

ಇಂದಿನ ಜನತೆಯ ದುಷ್ಚರಿತೆಯೆ ಮುಂ
ದಾಡುವ ಮಾಸದ ಮಾಲಿನ್ಯ!

ಮನೆಮಾರಿನ ಮನ್ನಣೆಯೇ ಜಗದಲಿ
ವನಿತೆಯ ಕಾವಲ ಕಿರುಕೋಟೆ
ತನಬಳಗವನುಳಿದಾಕಡೆ ಜಾರುವ
ಜತನಕೆ ಬಗೆಗೊಂಬಳು ಕುಲಟೆ!

(ರಾಧೆಯೊಡನೆ)

ಆಹ! ನಿನ್ನೊಲವಿನ ಪರಿಹಾಸ್ಯದ ಮೂ
ದಲಿಕೆಯ ಹೊತ್ತಿಹುದೀ ಹರಣ
ಬಹ ನೆಂಟರ ಬಹುಮಾನದ ಸಭೆಯಲಿ
ಹಿರಿಯಕ್ಕನ ಬಹು ಗುಣಗಾನ!

ಗರತಿಯರಾಡುವ ಮಾತಿನ ಮರೆಯಲಿ
ಮಿಂಚಿಹುದಪಹಾಸ್ಯದ ಜಳಕ
ಎರಡಾಸೆಗೆ ಕೈನೀಡಿದ ಹೆಣ್ಣಿನ
ಹೆಜ್ಜೆಯು ಕೊಳಲಿರುವುದೆ ನರಕ!

ಸಾಕೀಸಲ್ಲದ ಸುಖದನುಸಾರದ
ಮನೋವಿಕಾರದ ಸಂಪರ್ಕ
ಲೋಕಾಚಾರಕೆ ಕೆಸರೆರಚುವ ಕೆಡು
ಗೈಮೆಯ ಪಾಪದ ನಿರ್ವೋಕ!

(ರಾಧೆಯನ್ನು ತಡೆದು ನಿಲ್ಲಿಸುವಳು)

ರಾಧೆ—(ಮೆಲ್ಲನೆ ಕೈ ಬಿಡಿಸಿಕೊಳ್ಳುತ್ತ)

ಗಳಿಗೆ ಬಾಳಿಕೆಯಲ್ಲಿ ಬಳಲಿದೀಜಗತಿಯಲಿ
ಕೊಳಲಿರುವುದೇನುಂಟು—ಬಿಸಿಲಿನೊರತೆ

ಇಳೆಯುರೊಚ್ಚೆಯನುಳಿದು ತಿಳಿನೀರಿಗಾಗಿ ನೀ
ಳ್ಕರಿಸುತಿಹ ಚಾದಗೆಯ ಚಾರುಚರಿತೆ!

ಬದುಕು ಬಯಲಾಸೆಯಿದು ಬಾವನ್ನವಾಗಿ ಸೌ
ಸವ ಸೂಸಲಿಹುದೊಂದೆ ಪುಣ್ಯಸಂಗ
ಆದಕಾಗಿ ಮನದಹಂಕಾರಗಳ ಗಡಿದಾಂಟಿ
ನೋಂತು ನಡೆದಿಹುದೆ ದಿವ್ಯಾನುಷಂಗ!

ದೈವಿಕತೆಯಲಿ ಮನಸು ಮಾತುಗೈಮೆಗಳೆಲ್ಲ
ಮಾನವತೆಯುಳಿದು ಮೈಗೂಡಿದಾಗ
ನೋವು ನರಳಾಟದೀ ಮಮತೆಮಾಯಕವಾಗಿ
ನಿರ್ಮಮತೆಯೊಂದುಳಿವ ಮಹಾಯೋಗ!

ಯಾಗಾಗ್ನಿಯಲಿ ಸುರಿದ ಹವ್ಯಕವ್ಯದ ಹವನ
ವೈವಿಧ್ಯವಳಿದು ಮೈಗೂಡಿದಾಗ
ರಾಗ ರಸನೆಯ ರುಚಿಯ ವಿಧವಿಧದಭಿವ್ಯಕ್ತಿ
ಸಾಕಲ್ಯಗೊಂಬುದೇ ಹವಿರ್ಭಾಗ!

ಕೃಷ್ಣನೇ ನಮ್ಮುಸಿರು ನಮ್ಮ ಬರಿಭಾವನೆಗೆ
ಭವ್ಯತೆಯನಳವಡಿಪ ಪರಿಪಾವನ
ನಮ್ಮ ಜಡ ತಂದ್ರತೆಯ ಮಂದ್ರತಾರವನಲುಕಿ
ಗೈಮೆಗಳ ಕೈಗೊಂಬ ಸಚ್ಚೇತನ

ಗೋಕುಲದ ಕೇರಿಯಲಿ ಕರೆವ ಕೊಳಲಿನಗಾನ
ಸರ್ವ ಚೇತನದ ಬೇಡಿಕೆಯ ಹಾಡು
ಲೋಕ ಲೋಕವು ತಪಂಗೊಳುವ ಸಾನ್ನಿಧ್ಯದಲಿ
ನಮ್ಮ ಮನೆಮಾರೇನು? ಸಾಕು ಹೊರಡು!

ಚಂದ್ರಾವಳಿ— ಕೃಷ್ಣನೇಸೋ ಮಾಟಗಾರನಹುದಂತೆ ಸಂ
ಕಷ್ಟದಲಿ ಕಾದಿರುವ ದೈವವಿರಲಿ

ಬಿತ್ತಿ ಬೆಳೆಗೊಂಬ ಹೊಲಕೊದಗಿಬಹ ನೀರು ಮ
ತ್ತೆತ್ತಲೋ ನುಗ್ಗಿದರೆ—ಅದೆಹಾವಳಿ!

ಈ ವಿಶ್ವಸಾಗರದ ಪರಿಧಿಯಲಿ ವ್ಯಕ್ತಿತ್ವ
ದನುರೂಪ ಚಿದ್ರತಿಯ ಸುಖಸ್ಪಂದ
ತನ್ನ ಮಾರ್ಗದ ನೆರವುಗೊಂಡು ತಾನಡಗುತಿಹ
ಹುಟ್ಟುಸಾವಿನ ಹರಕೆಗೊಂಬ ಚೆಂದ

ತಾನೆ ತನ್ನನುರೂಪ ತೀರದಲಿ ಮೈಯೊಡ್ಡಿ
ತೀರಿದರೆ ಚೆನ್ನಾಯ್ತು ಜೀವಲಹರಿ
ಆರಾರಿಗೊದಗದನುಸಾರದಲಿ ನಡೆವ ಸಂ
ಸಾರವಿದು ಕಟ್ಟಳೆಯ ಕಿರಿದು ದಾರಿ

ಒಂದು ಮಾಮರವೇರಿ ಮೆರೆವ ಮಲ್ಲಿಗೆಯಂತೆ
ಹೆಂಗರುಳು ಹೂತು ಹದಗೊಳುವ ನಂಟು
ಒಂದೆ ನಲ್ಮೆಯ ದಾರಿ ಮೀರಿದರೆ ಮಾಂಗಲ್ಯ
ಮೆಚ್ಚದಿಹ ತಾವರೆಯ ಮುರಿದ ದಂಟು

(ಗೋಪಕನ್ಯೆಯರೊಡನೆ)

ಇದಕಾಗಿ ಬಂದಿರುವೆನಿಲ್ಲಿ ನಿಮ್ಮುಪಹಾಸ
ದಾದರದ ಹಾದರದ ಹೊಲೆಹೆಚ್ಚಳ
ಕುದಿದಿಹುದು ಮನಸು ನಿಮ್ಮನುಚಿತದ ಕೇಳಿಯಲಿ
ಇಂದು ಕೂಡುವೆನಿದಕೆ ಬಿಗಿಮುಚ್ಚಳ!

(ಎಂದು ದಾರಿ ಅಡ್ಡಕಟ್ಟಿ ರಾಧೆಯನ್ನು ಬಿಗಿಹಿಡಿದಿರುವಳು. ರಾಧೆ ಬಿಸುಸುಯ್ದು ತಡವರಿಸುವಳು.)

ಸಖಿಯರು— (ರಾಧೆಯನ್ನು ಕಂಡು ಕನಿಕರದಿಂದ)

ಹಿಂಗಡೆ ಮನೆ ಮಾರೆಲ್ಲವು ನಿಂತಿದೆ
ಕಾಯುತಲಿದೆ ಸಾಸಿರಕಣ್ಣು

ಮಂಗಳ ಮೂರ್ತಿಯ ದರುಶನಕೆಂದೇ
ಬಂದಿಹಳೇ ಸೊಬಗಿನ ಹೆಣ್ಣು

ಮುಂಗಾರಿನ ಮಳೆ ಕಾದಿಹ ಚಾದಗೆ
ಯಂತುಟು ನೀಳ್ಕರಿಸುವ ಹದನ
ಮುಂಗಾಣದೆ ದಡದಡಿಸುವ ಸಂಜೆಯ
ಹಕ್ಕಿಯ ಹೃದಯದ ದುಮ್ಮಾನ!

(ದೂರದಲಿ ಕೊಳಲದನಿ ಕೇಳ ಬರುವುದು)

ರಂಗಯ್ಯನ ಹೊಂಗೊಳಲಿನ ಮೆಲ್ಲುಲಿ
ಅದೊ! ನೋಡಾಕಡೆ ಕೇಳ್ದಿಹುದು
ಶೃಂಗಾರದ ರಸ ಕಲ್ಪದ ಶರಧಿಯ
ಕಲ್ಲೋಲದ ತೆರೆಯೆದ್ದಿಹುದು

ತಿಂಗಳಕಡೆ ಕೈನೀಡುವ ಕಿರುದೆರೆ
ಸಾರಿತು ಮುಂದಕೆ ವ್ಯೆಮರೆತು
ಹಿಂಗದ ಮಮತೆಯ ಮಾಧುರ್ಯದ ತ
ನ್ಮಯತೆಯ ಕೈವಲ್ಯಕೆ ಸೋತು!

(ರಾಧೆ ತಂಗಿಯನ್ನು ತಪ್ಪಿ ಸೆಳೆದುಕೊಂಡು ಮುಂದೆ ಸಾರಲು ಯತ್ನಿಸುವಳು. ಕೊನೆಗೆ ಕೈಸಾಗದೆ ಬೀಳುವಳು)

ರಾಧೆ—(ದುಃಖದಿಂದ)

ನಿನ್ನ ಸೇವೆಗೆ ಹರಿದ ನೀರಿದು
ನಿನ್ನ ಪಾದದೊಳರ್ಪಿತ
ನಿನ್ನ ಸಾಗರದಂಚಿನಲಿ ಸೆರೆ
ಗೊಳುವ ಸಂಗಮದೂರ್ಜಿತ

ಗಾಳಿ ಗಾಳಿಯ ತೀಡುವಲೆ ನಿ
ನ್ನಸಿರ ಭರವಸೆಯಾಡಿದೆ

ದಾರಿಗಾಣದೆ ಬಿದ್ದಿರಲು ನಿ
ನ್ನೊಲುಮೆ ಕೈಗಳ ನೀಡಿದೆ

ಕರೆದ ಕಡೆ ಕಾರುಣ್ಯದನಿಯಲಿ
ಬರುವ ಬಿರುದಿನ ದೈವತ
ಹರಿವ ಹಾಯಿಯ ಹಡಗಿನಂತುಟು
ತೊಳಲುತಿದೆ ಮನುಜೀವಿತ!

(ಕೊಳಲ ಧ್ವನಿ ಸಮೀಪಿಸಿದಂತೆ ಕೇಳುವುದು)

ಬಾರೊ ಮಂಗಲ ಮೂರ್ತಿ ಮೂಜಗ
ದಾದಿದೈವ ಪರಾತ್ಪರ
ಬಾರೊ ಸದ್ಗುಣ ಶರಣ ಕರುಣಾ
ಭರಣ ವರ ಪೀತಾಂಬರ!

(ಎಂದು ಕಣ್ಮುಚ್ಚಿ ಪ್ರಾರ್ಥಿಸುತ್ತಿದ್ದಂತೆ ಕೃಷ್ಣನು ಕೊಳಲೂದುತ್ತ ಬಂದು ನಿಲ್ಲುವನು. ಗೋಪಕನ್ಯೆಯರು ನಮಸ್ಕರಿಸುವರು)

ಕೃಷ್ಣ— ಬಿನ್ನಾಣದ ಸಿಂಗರಗಳ
ಬಿಂಕದ ಬೆಡಗಳಿವಾಗ
ನಲ್ಮೆಯ ಸಿರಿಯರಳೊಂದೇ
ಯೆದೆವಳ್ಳಿಯೊಳುಳಿವಾಗ

ಕುಡಿನೋಟದ ಕೈದೀವಿಗೆ
ಕಡೆಗಾಣಿಸುತಿರುವಾಗ
ಮೆಲುಮಾತಿನ ಸವಿಯೂಟಕೆ
ಬಗೆಯಾತುರವಡುವಾಗ—
ಬರುವೆನಿದೋ—ನಿನ್ನೆಡೆಗೆ!

ರಾಧೆ—(ಸಂಭ್ರಮದ ಸಂತೋಷದಿಂದ)

ಬಿನ್ನಾಣದರಿವಿಲ್ಲ
ಭಾವವೊಂದಿಹುದು
ಮನ್ನಣೆಯ ಮಾತಿಲ್ಲ
ಮೌನವೊಂದಿಹುದು

ರಾಗ ರಂಜನೆಯಿಲ್ಲ
ನಾದ ನೆರೆದಿಹುದು
ಭೋಗದಾರತಿಯಿಲ್ಲ
ಯೋಗದರಿವಿಹುದು!

ಬಾಳ ತೆರೆತೆರೆದಾಗ ಭಾವಿಸುವ ಹದನಿಲ್ಲ
ಪ್ರಾಣ ಪೂಜೆಯನೆಸಗಿ ನೆರೆವೆನೆನ್ನೊಡೆಯ!

(ಚಂದ್ರಾವಳಿ ಸಿಡುಕಿನಿಂದ ದೂರ ಸರಿದು ನಿಂತಿರುವಳು)

ಕೃಷ್ಣ—(ನಸುನಗುತ್ತ)

ಯಾರಿವಳು? ಮನದೆಣಿಕೆಯೇರಿನಭಿಮಾನದಲಿ
ದೂರ ದೂರಕೆ ಸರಿವ ಸಿಡುಕಿಗಾತಿ
ತೋರುವೊಳ್ಬೆಳಕ ಸರಿಗಾಣಲಾರದೆ ಕಣ್ಣ
ಕೋರೈಸುತಿಹ ನಿಶಾಚರರ ವೃತ್ತಿ!

ಚಂದ್ರಾವಳಿ—(ಕೋಪದಿಂದ)

ಸಾಕು ಸಾಕೀಮಾತು ನಮ್ಮ ಮನಸಿಲಿಹೂತು
ತೋರುವಾಸೆಯ ಹೂವಿಗೊಂದೆ ನೇಮ
ಆ ಕರ್ಮಕಲ್ಯಾಣರೇಖೆಯನು ಮೀರದಿಹ
ಸೌಗಂಧ ಶೀಲತೆಯ ತೃಪ್ತಕಾಮ!

ಮನಸು ಮರ್ಕಟನಂತೆ ಹಾರಿದರೆ ಹದಗೊಳುವ
ಹಗ್ಗದಂತಿಹುದು ಸಂಸಾರ ಸೂತ್ರ

ತನಗಾಗಿ ತಾನೆಂಬ ಸಂಕೋಚದಲಿ ಮನಂ
ಗೊಳುವ ಬಾಂಧವ್ಯಗಳ ಭಾವಚಿತ್ರ

ನೀನೇಕೆ ಬಂದು ತಿಳಿಹೊಳೆಯ ಕಾಮಿತಗಳಲಿ
ಕಲಕಲತೆಯಾಗಿ ಕಲ್ಲೆಸೆದಿರುವುದು?
ಮಾನವತಿಯರು ಸೆರಗು ಸೋಂಕಿದರೆ ಸಾಯಲಿಹ
ಸಂಸಾರದಲಿ ಹಲ್ಲೆ ಹೊಸೆದಿರುವುದು?

ಕೃಷ್ಣ—(ಸಮಾಧಾನವಾಗಿ)
ಸಹಜವೀಮಾತು. ನಿನ್ನನುಭವದ ತುಟಿಗಳಲಿ
ಸಿರಿಸೋನೆಯಂತೆ ಜಗುಳಿರುವುದುಚಿತ
ಬಹ ಯುಗಂಗಳಲಿ ಜನಜನತೆ ಕಾಣುವ ಕಿಸುರು
ಭಾವನೆಯ ಬಿಂಬದಂತಿರುವ ಚಿತ್ತ

ನೋಡು ನೋಡತ್ತ ಕಡೆ ಬಾನುಬಯಲೆಲ್ಲ ನ
ನ್ನುಸಿರ ತಂಗಾಳಿಯಲಿ ಬೀಸುತಿಹುದು
ಕಾಡು ಕಮರಿಯನುಳಿವ ಹೊಲ ಬಯಲ ಕಾಳ್ಪುರವು
ಶೃಂಗಾರ ಕರುಣೆಯನು ಸೂಸುತಿಹುದು

ಆದನು ಕಾಣುವ ನೋಟವಿಹುದು ಹಲಹದಿನೆಂಟು
ಮೆಚ್ಚುವರೊ ಬೆಚ್ಚುವರೊ ಯಾರು ಬಲ್ಲ!
ಮೆಚ್ಚಿಮನವೈಸಿಕೊಂಡಾಡಿದರು ಬೆಚ್ಚಿ ಬಾ
ಯ್ತೆಗಳಿದರು ಕೂಡಲಿಹುದೊಂದೆ ಚೆಲ್ಲ

ಆ ವಿಶ್ವರೂಪದಲಿ ಕಂಡು ಕೂಡಿದ ಕನಸೆ
ಜೀವಿಗಳ ಬಗೆಯಲಚ್ಚಳಿಯದಿಹುದು
ಅಲ್ಲಿ ಕಂಡಾಕೃತಿಯು ರಸವಿಮರ್ಶೆಯ ದೃಷ್ಟಿ
ದಿವ್ಯ ಸಂಪರ್ಕವಲಿ ತೋರುತಿಹುದು

ಕಂಡು ಕಣ್ಕೆಸುರಿವರು ಸರಸವೆಂದಾಡಿದರು
ಅದು ನನ್ನದೊಂದೆ ಸಂಸಾರ ಸೂತ್ರ
ಕಂಡು ವಿಷಯಾಟವಿಯೊಳಂಡಲೆವ ಜೀವಿಗಳ
ಮುಂದೆಗೂದುವೆನು ಕೈಗೊಳಲನತ್ತ

ಕ್ಷಣಿಕ ವಿಶ್ರಾಂತಿಯಲಿ ಕೂತ ಹಕ್ಕಿಯ ಹಿತಕೆ
ಕತ್ತಲಾಗುವ ಮುನ್ನ ಕಲ್ಲೆಸೆವೆನು
ದಣಿದಿರುವ ಪಯಣದಲಿ ಹೊಳಲಿಹುದು ಬಹುದೂರ
ಅದಕಾಗಿ ಬಾರೆಂದು ಕರೆಕರೆವೆನು!

ವಿಶ್ವದಾನಂದದಲಿ ನನ್ನಿರವನರಿತವರು
ಮುಂದೆ ಮುಂದಾಗಿ ನಡೆತರಲು ಬಹುದು
ನಶ್ವರಕೆ ಮೆಚ್ಚಿ ಕುಳಿತವರು ಕೊನೆಗಳಿಗೆಯಲಿ
ಕುಂಟು ಕುರಿಯಂತೆ ಬಿಕ್ಕಳಿಸಬಹುದು

ಆದರೇನೊಂದೆಗತಿ ನನ್ನ ಸಮಶೃಂಗಾರ
ಸಾಧಿಸುವ ಜೀವಿಗಳ ಚಿಂತೆಯೊಂದೆ
ಆ ಧರ್ಮವೇ ವಿಷಮಜೀವನಕೆ ಬಿಗಿದಿಹುದು
ದಿನರಾತ್ರಿ ಕಟ್ಟಿಹುದು ಕಣ್ಣಮುಂದೆ

(ಚಂದ್ರಾವಳಿಯು ಮುಂದೆ ಬಂದು)

ಹೇಳು ಸಿಡುಕಿನರಾಣಿ! ಹೆಜ್ಜೆ ಹೆಜ್ಜೆಗೆ ನನ್ನ
ರೂಪವನು ಮರೆಯುದಿಹ ನಿನ್ನ ದುಃಖ
ಕೇಳುತಿದೆ ನನ್ನ ಸಿರು ಮನೆಮನೆಯ ಕೋಣೆಯಲಿ
ಕದವಿಕ್ಕಿದರು ಬೆನ್ನ ಬಿಡದ ನರಕ!

(ಅವಳ ಮುಖವನ್ನೆ ನೋಡುತ್ತ)

ಕೊಳದ ಕಡೆ ನಡೆದಾಗ ನಾಬರುವೆನತ್ತಕಡೆ
ನೀರಿನಲಿ ತೋರುತಿದೆ ನನ್ನ ಬಿಂಬ

ಹೊಲಗಳಲಿ ಬೆಟ್ಟದಲಿ ಗೋಕುಲದ ಬೀದಿಯಲಿ
ಮರೆಯಲಾರದ ವಿಷಮರತಿಯ ಜೃಂಭ!

(ಚಂದ್ರಾವಳಿ ಗಾಬರಿಯಿಂದ ತಲೆಯಲ್ಲಾಡಿಸುತ್ತ ತನ್ನಷ್ಟಕ್ಕೆ ಗುಣುಗುಟ್ಟುವಳು)

ಚಂದ್ರಾವಳಿ— ಸತ್ಯವಿದು. ದಿನದೆಂಟು ಜಾಮದಲಿ ಕಾಣುತಿಹ
ನಿತ್ಯರೂಪವಿದೊಂದೆ ನನ್ನ ಮುಂದೆ
ಮತ್ತೆ ಮಿಸುಕಾಡುವೆನು ಕನಲಿ ಕೈ ಕೈ ಹೊಸೆದು
ಕಾದುವೆನು ಕಲ್ಪನೆಯ ಬೆಚ್ಚರವಿದೇ!

ಕೃಷ್ಣ—(ಅವಳ ಇಂಗಿತವನ್ನು ಗ್ರಹಿಸಿಕೊಂಡು ನಗುತ್ತ)
ಈ ಸತಿಯರೆಲ್ಲ ಕಾಣುವ ಚಿಂತೆಯಂತಿರಲಿ
ನಿನ್ನ ಪರಿಯಿವರ ಸಿರಿಗೇನಂತರ?
ಪ್ರೀತ ಪುಣ್ಯಾಂಗಣದೆ ಚಿಗಿವ ರಾಧಿಕೆಯಿವಳು
ನೀಂ ದ್ವೇಷದಲಿ ಸಲುವ ಮಹಾಪೂರ!

ಸುತ್ತಿ ಬರುತಿದೆ ಭಕ್ತಜನರ ಬಗೆ ಬಲಗೊಂಡು
ನೀನೊ ನಡೆಗೊಂಡಿರುವ ವಾಮಮಾರ್ಗ
ಇತ್ತ ಡಿಯು ಪೂರವಲಿ ಪಿಂದರೇನಾಯ್ತು? ಸಂ
ಸಕ್ತಿಗೊಳುತಿಹುದೆ ದಿವ್ಯಾಪವರ್ಗ!

ಚಂದ್ರಾವಳಿ—(ಮಹಾಚಿತ್ತಕ್ಷೋಭೆಯನ್ನು ಅನುಭವಿಸುತ್ತ)
ಏಂಗೈಯಲಿಪುದಿನ್ನು? ಏನೊ ಮಹದಾರಂಭ
ಮೇಳೈಸಿದಂತಿಹುದು ಮಮತೆಯತ್ತ
ತಾನೆಂಬ ಕತ್ತಲಿನ ಕೋಣೆಯಲಿ ಹುದುಗಿರುವ
ಮಾನವತೆ ಮಿಗುತಿಹುದು—ಮಧುರಚಿತ್ತ!

ಕೃಷ್ಣ—(ಅವಳ ಕೈ ಹಿಡಿದು)
ಮಲ್ಲಿಗೆಯ ಮಲರ್ರಳಿ ಸಿರಿಮುಡಿಯನೇರಿದರೆ
ಸಲ್ಲದಾಸರದ ನಿರ್ಮಾಲ್ಯರೂಪ

ಚೆಲ್ಲು ಚೆಲುವಿಕೆಯ ಸೌರಭ್ಯದಲಿ ದೆಸೆತೀವಿ
ತುಂಬಿದರೆ ಸದ್ಗಮದ ರಸನಿರೂಪ!

ಚಂದ್ರಾವಳಿ—(ಕ್ಷಣಕಾಲ ಸುಮ್ಮನಿದ್ದು ಕೊನೆಗೆ ತನಗೆ ತಾನೇ ತಿಳಿವುಗೊಂಡು ತತ್ತರಿಸುತ್ತ)

ನಶ್ವರದ ವಿಶ್ವದಲಿ ಶಾಶ್ವತವನರಿಯುವೆನೆ
ದ್ವೇಷದೆಲ್ಲೆಯನಿಾರಿ ಮುನ್ನಡೆವೆನೆ?
ಹೃಸ್ವದಿಂದಾಕಾಶಕೊಲಿವ ಮಾಹಾತ್ಮ್ಯದಲಿ
ಚಿತ್ರೈಸಿ ದಿವ್ಯದರ್ಶನಗೊಳುವೆನೆ?

(ಭಕ್ತಿಯಿಂದ ನಮುಸ್ಕರಿಸುವಳು. ಕೃಷ್ಣ ಅವಳನ್ನು ನೋಲೆತ್ತುತಿರುವಾಗ ರಾಧೆ ಅಸಮಾಧಾನದಿಂದ ಹಿಂದೆ ಸರಿದು ಸಾಗುವಳು.)

ರಾಧೆ— ಈ ತನಕದೂರಿದಳು ಸಿಡುಕಿ ಹೊಗೆಯಾಡಿದಳು
ಮಾನಮರ್ಯಾದೆಗಳ ಕಂಠಪಾಠ
ಮತ್ತೆ ಮೆತ್ತನೆ ನುಸುಳಿ ಕೃಷ್ಣನನೆ ಸೇರಿದಳು
ನಮ್ಮದೇನುಂಟು ಬರೆ ಮಕ್ಕಳಾಟ!

(ಕೃಷ್ಣನು ಮುಂದೆ ಬಂದು ರಾಧೆಯ ಕೈಹಿಡಿದು ವಿಶ್ವಾಸದಿಂದ)

ಕೃಷ್ಣ-- ರಾಧೆ ಮಾಧವನನುಳಿದಿಲ್ಲ. ಮೂಲೋಕವೇ
ಹಾಡುತಿಹ ಸುಪ್ರೇಮದಮರಗೀತ
ಆದರೇನೊಳಿತು ಕಡೆ ಹಾದಿಗೊಂಡವರ ನಡೆ
ಯಾದರಕೆ ನೆರೆದಿರುವ ಪಕ್ಷಪಾತ!

ಏಳುಹುಟ್ಟಿನ ದಿವ್ಯ ಭಕ್ತಿಯಲಿ ತೀರದಿಹ
ಶಾಪಸಂದಿರಲಿಹುದು ಮೂರು ಜನ್ಮ
ಬಾಳು ಹಗೆತನದ ಮೆಟ್ಟಿಲನೇರಿ ನಿಚ್ಚಳಂ
ನೀಳ್ಕರಿಸಿ ನನ್ನನೇ ಪಡೆವ ನೇಮ

ನನ್ನನನವರತ ನೆರೆನಂಬಿರುವ ಸಜ್ಜನರ
ಬೆಂಬತ್ತಿ ಬರುತಿಹೆನು ಹಿಂದೆ ಹಿಂದೆ
ನನ್ನ ಹಗೆತನಗೊಂಡು ಹಲುಬುತಿಹ ಜೀವಿಗಳ
ಜೊತೆಯಾಗಿ ಸುಳಿಯುವೆನು ಮುಂದೆ ಮುಂದೆ!

ಗೋಕುಲದ ಕೇರಿಯಲಿ ಸುರಿದ ಕೊಳಲಿನ ಗಾನ
ದಮೃತಸೇಚನೆಯಿಂದು ಸಫಲವಾಯ್ತು
ಏಕೊ ತೊಳಲಿದ ಜೀವವಿಂದು ಗೊಲ್ಲನ ಕರೆಗೆ
ತಾನೆ ಬಂದಿಹುದು ಮನ್ನಣೆಯನಿತ್ತು

ರಾಧೆ—ಚಂದ್ರಾವಳಿ—(ಇಬ್ಬರೂ ನಮಸ್ಕರಿಸುತ್ತ)

ಅಪರಾಧವಪರಾಧ—ಅಪರಾಧವಪರಾಧ
ನಿನ್ನ ಸೇವೆಗೆ ನಮ್ಮದಿದೆ ಚತುರ್ವೇದ
ಕೃಪೆಗೊಂಡು ಸಜ್ಜನರ ಕಾವ ನಿನ್ನನುರಾಗ
ದಿವ್ಯದರ್ಶನಕೆ ನಮ್ಮಾತ್ಮದಭಿವಾದ!

(ಕೃಷ್ಣನು ಇಬ್ಬರನ್ನೂ ಎತ್ತಿ ಇಕ್ಕೆಲದಲ್ಲಿರಿಸಿಕೊಳ್ಳುವನು)

ಗೋಪಕನ್ಯೆಯರು- (ಕೈಮುಗಿದು ಸಂತೋಷದಿಂದ)

ವೃಂದಾವನದಲಿ ನಿಂದಿಹ ಹರಿಗೋ
ವಿಂದನ ಕಂಡಿಹಿರ?
ಮಂದಾರದ ಮೃದು ಹಾಸದ ಮಧು ಮಾ
ರಂದನ ಕಂಡಿಹಿರ?

ವೈಕುಂಠದ ಸಿರಿ ಮೊಳೆದಿದೆ ಭುವಿಯಲಿ
ಕಾಳಿಂದಿಯ ತೀರ
ಗೋಕುಲದಲಿ ಹಾಲ್ಗಡಲುಕ್ಕಿತು—ಆಹ!
ಶ್ರೀಹರಿಯವತಾರ!

ಲೋಕದ ಕಣ್ಣೆವೆ ತೆರೆಯಿತು! ಕಂಡಿತು
ನಾಕದ ಪರಿವಾರ
ಈ ಕಡೆಯುರಳಿತು ಗೋಪಾಂಗನೆಯರ
ಪ್ರೀತಿಯ ಮಂದಾರ

ಸುಂದರಿಯರ ಚೆಲುಗಂಗಳ ನವಕುಸು
ಮಾರ್ಚನೆಯನುಸಾರ
ಚಂದನಚರ್ಚಿತ ಸುರಮುನಿಸೇವಿತ
ಪೂತನಾದಿಸಂಹಾರ

ಸಂತೋಷವೆ ಮೈದುಂಬಿತು ಧಿಮಿತಕ
ಕುಣಿಯಿತು ಶೃಂಗಾರ
ಚಿಂತೆಯ ಚಿತೆಯಾರಿತು ತಲೆದೋರಿತು
ಭಕ್ತಿಯ ಸಂಚಾರ!

ಗೋಕುಲದಲಿ ಹಾಲ್ಗಡಲುಕ್ಕಿತು ಅಹ!
ಶ್ರೀಹರಿಯವತಾರ
ಲೋಕದ ಸುಖ ಸಂಪದ ಬಲು ಹೆಚ್ಚಿತು
ಕಳೆಯಿತು ಭೂಭಾರ!

ವೃಂದಾವನದಲಿ ನಿಂದಿಹ ಹರಿಗೋ
ವಿಂದನ ಕಂಡಿಹಿರ?
ಮಂದಾರದ ಮೃದುಹಾಸದ ಪರಮಾ
ನಂದನ ಕಂಡಿಹಿರ?

೧೦—೯—೧೯೫೭

ಶ್ರೀ ಎಸ್. ವೆಂಕಟರಾಜರ ಕೃತಿಗಳ ಕುರಿತು-

ಅಂಬುಜಾಕ್ಷಿ

The author who is a poet of repute writing his first novel must be congratulated fcr his rightious indignation and enthusiasm without committing excesses of realism which seem to be the latest fashions in novels dealing with prostitution as a problem

'The Sunday Standard'

ಈ ಕಿರುಗಾದಂಬರಿಯು ಈಗ ಸ್ವಲ್ಪ ಚರ್ವಿತ ಚರ್ವಣವಾದ ವೇಶ್ಯಾ ಸಮಸ್ಯೆಗೆ ಸಂಬಂಧಿಸಿದ್ದು. ಆದರೆ ಅದನ್ನು ನೋಡುವ ಈ ಲೇಖಕರ ದೃಷ್ಟಿಯು ಇಂಥ ಸಾಮಾನ್ಯ ಕಾದಂಬರಿಗಳಲ್ಲಿ ಕಾಣಬರುವುದಕ್ಕಿಂತ ಭಿನ್ನವಾಗಿದೆ. ಶ್ರೀ ವೆಂಕಟರಾಜರು ಕಥೆಯನ್ನು ಮನಸ್ಸಿಗೆ ನಾಟುವಂತೆ ಹೇಳಿದ್ದಾರೆ.

"ಕರ್ಮವೀರ"

ಧರ್ಮಶಾಲೆ—

Dharmashale is a novel aiming at social reform. The author attacks some of the malpractices that are carried on in the name of religion. The attack is not against religion but against the extravagance and immorality prevalent in some of the religious institutions. The book is written in simple effective style and it makes interesting reading.

'The Sunday Standard'

ತುಂಗಮ್ಮನ ತವರುಮನೆ—

The simple lives of a few villagers are described in this book in a simple and natural style. The author has dealt with his characters in a realistic and sympathetic manner.

'The Sunday Standard'

ಕೈಲಾಸದಲ್ಲಿ ಕಮ್ಯುನಿಷ್ಟರು

ಕವಿ ಹೃದಯ ಮತ್ತು ಕಲ್ಪನಾ ಸಾಮರ್ಥ್ಯವುಳ್ಳ ಪ್ರತಿಭಾಶಾಲಿ ವೆಂಕಟರಾಜರು ಕೈಲಾಸದಲ್ಲಿಯೂ ಕಮ್ಯೂನಿಷ್ಟರ ಪ್ರಭಾವವನ್ನು ಕವಿ ಕಣ್ಣಿನಿಂದ ಕಂಡಿದ್ದಾರೆ. ಇಂತಹ ಉತ್ತಮ ಕೃತಿಗಳು ಇನ್ನೂ ಹಲವು ಶ್ರೀಯುತರ ಲೇಖನಿಯಿಂದ ಹರಿದು ಬಂದು ಜನತೆಗೆ ಮಾರ್ಗದರ್ಶನ ಮಾಡುವಂತಾಗಲಿ. ಕವಿ ವೆಂಕಟರಾಜರ ಈ ಕೃತಿ ಎಲ್ಲಾ ದೃಷ್ಟಿಯಿಂದಲೂ ಪ್ರಶಂಸನೀಯವಾದುದು.

"ನವಯುಗ"

ಕವಿತಾ ಕಾಮಿನಿ (ಭಾಗ ೨)

ವಿವಿಧ ಛಂದಸ್ಸಿನ ಪ್ರಯೋಗ, ಭಾವಭಾಷೆಗಳ ಸಹಜ ಸುಂದರ ಸಮ್ಮೇಳನ, ಮೋಹಕ ಶೈಲಿಗಳಿಂದ ಈ ಕಾವ್ಯ ಸಂಗ್ರಹವು ಸ್ವಾಗತಾರ್ಹವಾಗಿದೆ.

'ಕರ್ಮವೀರ'

ಭಿನ್ನ ಭಿನ್ನ ಛಂದಗಳಲ್ಲಿ, ಭಿನ್ನ ಭಿನ್ನ ಬಂಧಗಳಲ್ಲಿ ರಚಿತವಾಗಿರುವ ಇದರಲ್ಲಿಯ ಹಲವು ಕವಿತೆಗಳನ್ನು ಕಾವ್ಯಾಭ್ಯಾಸಿಗಳು ಅಭ್ಯಸಿಸಬೇಕಾಗಿದೆ. ಭಾಷೆಯ ಪರಿಶುದ್ಧಿ ಭಾವದ ನೈರ್ಮಲ್ಯ ಮತ್ತು ಸ್ಪಷ್ಟತೆಗಳನ್ನು ನವ್ಯಕವನಗಳ ನವೀನ ಭಕ್ತರು ಈ ಕೃತಿಯಿಂದ ಗುರುತಿಸಿಕೊಂಡು ತಮ್ಮನ್ನು ತಾವು ತಿದ್ದಿಕೊಳ್ಳುವಂತಾದರೆ ನಮ್ಮ ಕಾವ್ಯ ಪ್ರಪಂಚಕ್ಕೆ ಉಪಕಾರವೇ ಸರಿ. ಈ ಕವಿತಾ ಕಾಮಿನಿಗೆ ಹೃತ್ಪೂರ್ವಕವಾದ ಸ್ವಾಗತವನ್ನು ಬಯಸುವುದು ಪ್ರತಿಯೊಬ್ಬ ಕಾವ್ಯ ಪ್ರಿಯನ ಕರ್ತವ್ಯವಾಗಿದೆ.

'ಯುಗ ಪುರುಷ'

ಸರಸೆಯೂ ಸಾಲಂಕೃತೆಯೂ ಆದ ಕವಿತಾ ಕಾಮಿನಿಯನ್ನು ಮುಡಿಯಿಂದ ಅಡಿಯ ವರೆಗೆ ಮುಟ್ಟಿ, ತಟ್ಟಿ, ಮೂಸಿ, ಸವಿದು ಪೆರಮಾನಂದಪಟ್ಟೆನು. ನಂಬಿರಿ! ನೀವೊಬ್ಬ ವರಕವಿ. ವಾಣಿ ನಿಮ್ಮ ನಾಲಗೆಯಲ್ಲಿ ರಸವತ್ತಾಗಿ, ಅರ್ಥ ಭರಿತಳಾಗಿ ನರ್ತಿಸುತ್ತಿರುವಳು. ಕೇವಲ ದಕ್ಷಿಣ ಕನ್ನಡದಲ್ಲಿಷ್ಟೆಯಲ್ಲ—ಇಡಿಯ ಕನ್ನಡ ನಾಡಲ್ಲೆ ನಿಮ್ಮ ರಸವತ್ಕವಿತಾ ಸಂಕಲನ ಪೂಜನೀಯವಾಗುವುದು. ಉಡುಪಿಯ ರಸಿಕ ಮಂಡಲಿಗಳು ನಿಮ್ಮನ್ನು ಸಾರ್ವಜನಿಕವಾಗಿ ವಿಶೇಷ ಗೌರವವಿತ್ತು ಪೂಜಿಸಬೇಕು!

ಜಿ. ಆರ್. ಪಾಂಡೇಶ್ವರ

ಬೆಂಗಳೂರು.